MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 04 | ಸಂಚಿಕೆ: 270 | ಮಂಗಳವಾರ : 12-08-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 270 | TUESDAY : 12-08-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಶೇ. 44 ರಷ್ಟು ಸಾಫ್ಟ್‌ವೇರ್ ರಾಜ್ಯದಿಂದಲೇ ರಫ್ತು: ಸಿಎಂ

**ಬೆಂಗಳೂರು, ಆ.11–** ದೇಶದಲ್ಲೇ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಸಾಫ್ಟ್‌ವೇರ್ ರಫ್ತು ಮಾಡುವ ಕೀರ್ತಿ ಕರ್ನಾಟಕ ರಾಜ್ಯವಾಗಿದ್ದು, ಶೇ. 44 ರಷ್ಟು ಸಾಫ್ಟ್‌ವೇರ್ ಗಳನ್ನು ರಫ್ತು ಮಾಡುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಾಹಿತಿ ತಂತ್ರಜ್ಞಾನ ವಲಯದಲ್ಲೇ ರಾಜ್ಯದ ಆರ್ಥಿಕ ಪಾಲು ಶೇ. 26ರಷ್ಟಿದೆ. ಈ ಮೂಲಕ 875 ಜಾಗತಿಕ ಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪಿಸುವ ಸಾಮರ್ಥ್ಯ ಹೊಂದಿದೆ. ಇದು ದೇಶದ ಶೇ. 30 ರಷ್ಟು ಪಾಲನ್ನು ಕರ್ನಾಟಕದಿಂದಲ್ಲೇ ನಿರ್ವಹಿಸಲಾಗುತ್ತದೆ ಎಂದು ಹೇಳಿದರು.

ನ.18 ರಿಂದ 20ರವರೆಗೆ ನಡೆಯಲಿರುವ ಬೆಂಗಳೂರು ಟೆಕ್ ಶೃಂಗ 2025 ರ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು 100ಕ್ಕೂ ಹೆಚ್ಚು ಕಂಪನಿಗಳ ಸಿಓಗಳ ಜೊತೆ ಉಪಾಹಾರ



ಕೂಟದ ಜೊತೆಯಲ್ಲಿ ಮಾತನಾಡಿದ ಅವರು 2029ರ ವೇಳೆಗೆ ಇನ್ನು 500ಕ್ಕೂ ಹೆಚ್ಚು ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು ಸ್ಥಾಪಿಸು ಗುರಿ ಹೊಂದಿದ್ದೇವೆ.

ಈ ಮೂಲಕ ಇದ್ದರಿಂದಾಗಿ ಮೂರುವರೆ ಲಕ್ಷ ಉದ್ಯೋಗಿಗಳು ಮತ್ತು 50 ಬಿಲಿಯನ್ ಅಮೆರಿಕನ್ ಡಾಲರ್ ಆರ್ಥಿಕ ಪ್ರಗತಿ ಸೃಷ್ಟಿಯಾಗಲಿದೆ. ಕೇವಲ ಬೆಂಗಳೂರು ಮಾತ್ರವಲ್ಲದೆ ರಾಜ್ಯದ ಇತರ ಭಾಗಗಳಲ್ಲಿ ಮಾಹಿತಿ ತಂತ್ರಜ್ಞಾನ ವಲಯಗಳನ್ನು ಸ್ಥಾಪಿಸುವುದಾಗಿ ಹೇಳಿದರು.

ಕೃತಕ ಬುದ್ಧಿಮತ್ತೆಯಲ್ಲಿ ಇಡೀ ವಿಶ್ವದಲ್ಲೇ ಬೆಂಗಳೂರು 5ನೇ ಸ್ಥಾನದಲ್ಲಿದೆ. ಈ ಮೂಲಕ ಭಾರತ ಶೇ 50 ರಷ್ಟು ಎಐ ಪ್ರತಿಭೆಯನ್ನು ರಾಜ್ಯದಿಂದಲ್ಲೇ(2ನೇಪುಟಕ್ಕೆ)

## ಕನ್ನಡಕ್ಕೆ ಎಲ್ಲವನ್ನೂ ಕೊಡುವ ಶಕ್ತಿ ಇದೆ: ಸವಿತಾ ನಾಗಭೂಷಣ

**ಬಳ್ಳಾರಿ, ಆ.11–** ಕನ್ನಡಕ್ಕೆ ಎಲ್ಲವನ್ನೂ ಕೊಡುವ ಶಕ್ತಿ ಇದೆ. ಕನ್ನಡದ ಕಥಾ ಪ್ರಪಂಚದ ಮಟ್ಟಕ್ಕೆ ನಿಲ್ಲುವಂತಹುದು.

ಕುವೆಂಪು ಕಾರಂತ, ಅನಂತಮೂರ್ತಿ ಅವರನ್ನು ಓದದೇ ಸಾಹಿತಿ, ಲೇಖಕ ಆಗಲು ಆಗದು, ಕನ್ನಡ ಸಾಹಿತ್ಯವನ್ನು ಓದಿದರೆ ವಿಶ್ವ ಸಾಹಿತ್ಯ ಓದಿದಂತೆ ಆಗಲಿದೆ. ಈ ಕಥಾ ಕಮ್ಮಟದ ಮೂಲಕ ಕತೆಗಾರಿಕೆಯ ಹೊಸ ಪ್ರಪಂಚ ಹೊರ ಹೊಮ್ಮಲಿ ಎಂಬ ಆಶಯವನ್ನು ಕವಿಯತ್ರಿ ಸವಿತಾ ನಾಗಭೂಷಣ ವ್ಯಕ್ತಪಡಿಸಿದರು.

ಅವರು ನಗರದ ಬಿಪಿಎಸ್ಸಿ ಶಾಲೆಯಲ್ಲಿ ಬೆಂಗಳೂರಿನ ಬೆಸಗರಳ್ಳಿ ರಾಮಣ್ಣ ಪ್ರತಿಷ್ಠಾನದೊಂದಿಗೆ ನಗರದ ಲೋಹಿಯಾ ಪ್ರಕಾಶನ ಹಮ್ಮಿಕೊಂಡಿದ್ದ ಡಾ.ರಾಜಶೇಖರ ನೀರಮಾನ್ವಿ ನೆನಪು ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡುತ್ತಿದ್ದರು. ನವ್ಯಕಥೆಗಳು ವಿಶ್ವದ ಗಮನ ಸೆಳೆದವು, ನೀರಮಾನ್ವಿಯವರ ಕಾಲದ ಕತೆಗಾರರ ಕಥೆಗಳೆಲ್ಲವೂ ವಿಶ್ವವನ್ನು ಪರಿಚಯಿಸುವಂತಹುಗಳೆಂದರು.




ನಾನು ವಿಫಲ ಕತೆಗಾರ್ತಿ, ನನ್ನ ಸಾಹಿತ್ಯದ ಹೆಜ್ಜೆಗೆ ಹಿರಿಯರ ಸಾಹಿತ್ಯವನ್ನು ಓದಿದ್ದು. ನೀರಮಾನ್ವಿ ಅವರ ಹಂಗಿನ ಅರಮನೆ ಓದಿದ್ದೆ. ಕಥೆಯನ್ನು ಓದಿದಾಗ ಪ್ರಶ್ನೆಗಳು ಉದ್ಭವವಾದರೇ ಅದರ ಲೇಖಕರು ಮಹಾನುಭಾವರು ಎಂದು ಭಾವಿಸಬೇಕಾಗುತ್ತದೆ.

ಕನ್ನಡವನ್ನು ಅನುವಾದ ಮಾಡುವುದು ಕಷ್ಟ, ಅನುವಾದದಿಂದ ಭಾಷೆಯ ಸೌಂದರ್ಯ ದೊರೆಯಲು ಸಾಧ್ಯವಿಲ್ಲ ಎಂದ ಅವರು. ನೀರಮಾನ್ವಿಯವರ ಕಥೆಗಳಲ್ಲಿ ಮನುಷ್ಯನ ಪಡಿಪಾಟಲು, ತನ್ನ ತನ, ಸಮಾಜ ತನ್ನನ್ನು ಕಾಣುವ ರೀತಿ ಮೊದಲಾದ ವಿಷಯಗಳ ಮೂಲಕ ಅವರು

ಆಧ್ಯಾತ್ಮಿಕತೆಯನ್ನು ಬಿಂಬಿಸಿದಂತೆ ಕಾಣುತ್ತದೆ. ಮಹಿಳೆಯರ ಪ್ರತಿಧ್ವನಿಯೂ ಪ್ರಜ್ವಲಿಸುತ್ತದೆ, ತೀಕ್ಷಣವಾಗಿದೆಂದರು.

## ಅಂಕಗಳ ಜೊತೆ ಜೀವನ ಕೌಶಲ್ಯ ಕಲಿಸುವ ಶಿಕ್ಷಣ ಅವಶ್ಯ:ಸಚಿವ ದರ್ಶನಾಪುರ

**ಕಲಬುರಗಿ,ಆ.11–** ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಪ್ರತಿಷ್ಠಾನ ಮತ್ತು ಸರ್ವಜ್ಞ ಹಾಗೂ ಜಸ್ಟಿಸ್ ಶಿವರಾಜ್ ಪಾಟೀಲ್ ಕಾಲೇಜು ಸಂಯುಕ್ತಾಶ್ರಯದಲ್ಲಿ ಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕಾಗಿ ನ್ಯಾಯಮೂರ್ತಿ ನಾಡೋಜ ಡಾ. ಶಿವರಾಜ ವಿ. ಪಾಟೀಲ ವಿರಚಿತ "ಮುಂಜಾವಿಗೊಂದು ನುಡಿಕಿರಣಗಳ ದರ್ಶನ" ಶ್ರಾವಣ ಮಾಸದ 11 ದಿನಗಳ ವಿಶೇಷ ಉಪನ್ಯಾಸ" ಕಾರ್ಯಕ್ರಮವನ್ನು ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಉದ್ಘಾಟಿಸಿದರು. ನಂತರ ಅವರು

ಮಾತನಾಡುತ್ತ, ವಿದ್ಯಾರ್ಥಿಗಳು ನೌಕರಿ ಮಾಡುವುದಕ್ಕಾಗಿ ಓದದೇ 10 ಜನರಿಗೆ ಕೆಲಸ ಕೊಡುತ್ತೇವೆಂಬ ಉದ್ದೇಶದಿಂದ ಶ್ರಮಪಟ್ಟು, ಸಮಯ ವ್ಯರ್ಥ ಮಾಡದೇ ಓದಬೇಕು. ಬರೀ ಅಂಕಗಳಿಂದ ವ್ಯಕ್ತಿತ್ವ ರೂಪು ಗೊಳ್ಳುವುದಿಲ್ಲ. ಪಾಲಕರು ಮತ್ತು ಶಿಕ್ಷಕರು ಮಕ್ಕಳ ಅಂಕಗಳ ಅಭ್ಯಾಸದ ಜೊತೆಗೆ ಜೀವನ ಕೌಶಲ್ಯ ಕಲಿಸುವ ಶಿಕ್ಷಣ ಇಂದಿನ ಅವಶ್ಯಕತೆಯಾಗಿದೆ ಎಂದರು. ಪಾಲಕರು ಕಷ್ಟಪಟ್ಟು ತಮ್ಮ ಮಕ್ಕಳನ್ನು ಉಜ್ವಲ ಭವಿಷ್ಯಕ್ಕಾಗಿ ಕಾಲೇಜಿಗೆ ಕಳುಹಿಸುತ್ತಾರೆ. ವಿದ್ಯಾರ್ಥಿಗಳು ಜೀವನದಲ್ಲಿ ಕಷ್ಟಬಂದಾಗ ಎದೆಗುಂದದೆ ಧೈರ್ಯದಿಂದ ಎದುರಿಸಿ ಸಾಧನೆ ಮಾಡಿದಾಗ ಜಗತ್ತು ಮೆಚ್ಚಿಕೊಳ್ಳುತ್ತದೆ ಎಂದರು. ಬದುಕಿನಲ್ಲಿ ಉತ್ತಮ ಜೀವನಕ್ಕೆ ಬೇಕಾದ ಸದ್ವಿಚಾರಗಳನ್ನುನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರ ಈ ಮುಂಜಾವಿಗೊಂದು ನುಡಿಕಿರಣಗಳ ದರ್ಶನ 11 ದಿನದ ಪ್ರವಚನದಲ್ಲಿ ತಿಳಿಸುವುದರಿಂದ ಮಕ್ಕಳ ಮಾನಸಿಕ ಒತ್ತಡ ನಿವಾರಣೆಯಾಗಿ ಉತ್ತಮ ರೀತಿಯಲ್ಲಿ ಅಧ್ಯಯನ ಮಾಡಲು ಹಾಗೂ ಪಾಲಕರ ಕನಸು ನನಸು ಮಾಡಲು ಸಹಕಾರಿಯಾಗುತ್ತದೆ ಎಂದು ಪ್ರೋತ್ಸಾಹಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿ ಶಾಸಕ ಅಲ್ಲಮಪ್ರಭು ಪಾಟೀಲ ಮಾತನಾಡುತ್ತ, ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡುವುದು ಅವಶ್ಯಕವಾಗಿದೆ. ನ್ಯಾಯಮೂರ್ತಿ ನಾಡೋಜ ಡಾ. ಶಿವರಾಜ ವಿ. ಪಾಟೀಲ ವಿರಚಿತ "ಮುಂಜಾವಿಗೊಂದು ನುಡಿಕಿರಣ–365" ಪುಸ್ತಕ ಪ್ರತಿನಿತ್ಯ ಓದುವುದರಿಂದ ಜೀವನದಲ್ಲಿ ನೆಮ್ಮದಿ ದೊರೆತು ಎಲ್ಲರಿಗೂ ಒಳ್ಳೆಯದಾಗುತ್ತದೆ ಎಂದರು.



ಕಾರ್ಯಕ್ರಮದ ಸಾನಿಧ್ಯ ವಹಿಸಿದ ಹಾಗೂ ವಿಶೇಷ ಉಪನ್ಯಾಸಕರಾದ ಪ್ರವಚನಯೋಗಿ ಪರಮಪೂಜ್ಯ ಮಹಾಂತ ಸ್ವಾಮಿಗಳು ಮುದಗಲ್ ಇವರು ನ್ಯಾಯಮೂರ್ತಿ ನಾಡೋಜ ಡಾ. ಶಿವರಾಜ ವಿ. ಪಾಟೀಲ ವಿರಚಿತ "ಮುಂಜಾವಿಗೊಂದು ನುಡಿಕಿರಣಗಳ ದರ್ಶನ" ಕುರಿತು ಪ್ರವಚನ ನೀಡುತ್ತ, "ಮುಂಜಾವಿಗೊಂದು ನುಡಿಕಿರಣ–365" ಈ ಪುಸ್ತಕ 365 ನುಡಿಮುತ್ತುಗಳನ್ನು ಒಳಗೊಂಡಿದ್ದು ಆಧುನಿಕ ಜಗತ್ತಿನ ಅವಸರದ ಪ್ರಪಂಚಕ್ಕೆ ಅಪರೂಪದ ಭಗವದ್ಗೀತೆ ಯಾಗಿದೆ. ಕನ್ನಡ ನಾಡಿನ ಉಪನಿಷತ್ತಾಗಿದೆ, ನಡೆ–ನುಡಿ ಒಂದಾದ ವಚನ ಸಂಹಿತೆಯಾಗಿದೆ ಎಂದರು.

ಮುಂದುವರೆದು ಮಾತನಾಡುತ್ತ, ಪರಮ ಪೂಜ್ಯ ಸಿದ್ದೇಶ್ವರ ಸ್ವಾಮೀಜಿ ಅವರು ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರ "ಮುಂಜಾವಿಗೊಂದು ನುಡಿಕಿರಣ–365" ಕೃತಿಗೆ ಬೆನ್ನುಡಿ ಬರೆಯುತ್ತ, ಈ ಮುಂಜಾವಿಗೊಂದು ನುಡಿಕರಣದ ಪುಟ್ಟಪುಟ್ಟ ಮಾತುಗಳು ; ಮಾತಿನಲ್ಲೆಲ್ಲ ಮಾಣಿಕ್ಯದ ದೀಪ್ತಿ ; ಒಳಗೆಲ್ಲ ಅನುಭಾವದಮೃತ ; ಮುತ್ತಿನ ಹೊಳಪು ; ಅಮೂಲ್ಯ ಜ್ಞಾನ ; ಮರೆಯಲಾಗದ, (2ನೇಪುಟಕ್ಕೆ)

## ವಿಷ್ಣುವರ್ಧನ ಸಮಾಧಿ ಪುನರ್ ನಿರ್ಮಿಸಿ:ವಿಷ್ಣು ಸೇನಾ ಸಮಿತಿ ಒತ್ತಾಯ




ಯುವ ಮಾರ್ಗ ಸುದ್ದಿ

**ದೇವದುರ್ಗ,ಆ.11–**ಕನ್ನಡದ ಮೇರುನಟ ಸಾಹಸಸಿಂಹ ಡಾ.ವಿಷ್ಣುವರ್ಧನ ಸಮಾಧಿಯನ್ನು ಕಿಡಿಗೇಡಿಗಳು ರಾತ್ರೋರಾತ್ರಿ ನೆಲಸಮ ಮಾಡಿದ್ದು, ಕೂಡಲೇ ಸರಕಾರ ಸಮಾಧಿಯ ಮರುನಿರ್ಮಾಣದ

ರಾಜ್ಯ ಕ್ರಮಕ್ಕೈಗೊಳ್ಳಬೇಕೆಂದು ವಿಷ್ಣು ಸೇನಾ ಸಮಿತಿ ಒತ್ತಾಯಿಸಿದೆ.

ಪಟ್ಟಣದ ಸಾರ್ವಜನಿಕ ಕ್ಲಬ್ ಆವರಣದಿಂದ ರ್‍ಯಾಲಿ ನಡೆಸಿ,ಮಿನಿವಿಧಾನಸೌಧದಲ್ಲಿ ತಹಸೀಲ್ದಾರ ಅಮರೇಶ ಬಿರಾದಾರಗೆ ಸೋಮವಾರ ಮನವಿ

ಸಲ್ಲಿಸಲಾಯಿತು.ಕೆಡಿಪಿ ಸದಸ್ಯ ರಾಮಣ್ಣನಾಯಕ, ಕರಡಿಗುಡ್ಡ,ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ನರಸಿಂಗರಾವ್ ಸರಕೀಲ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಶಿವರಾಜ, ಪ್ರತಿಭಟನಾ ರಾಲಿ ಉದ್ದೇಶಿಸಿ ಮಾತನಾಡಿ,ವಿಷ್ಣು ಸಮಾಧಿ ನೆಲಸಮ ಮಾಡಿರುವದು ರಾಜ್ಯ ಸರಕಾರಕ್ಕೆ ಒಂದು ಕಪ್ಪುಚುಕ್ಕೆಯಾಗಿದೆ ಗೌರವಾನ್ವಿತ ಚಿತ್ರನಟನಿಗೆ ಅಗೌರವ ತೋರಿಸಿದಂತಾಗಿದೆ.


ರಾಜ್ಯ ಸರಕಾರವೇ ಅಭಿಮಾನಿ ಸ್ಟುಡಿಯೋದಲ್ಲಿ ಅಂತ್ಯ ಸಂಸ್ಕಾರ ಮಾಡಲು ಅವಕಾಶಕಲ್ಪಿಸಿತ್ತು. ಸ್ಮಾರಕ ನಿರ್ಮಾಣದ ಭರವಸೆ ಕೂಡ ನೀಡಿತ್ತು. ಆದರೆ ನಟ ಬಾಲಣ್ಣನ ಕುಟುಂಬ ನ್ಯಾಯಾಲಯ ಮೊರೆ ಹೋಗಿದ್ದ ಪರಿಣಾಮ ಸ್ಥಗಿತಗೊಂಡಿತ್ತು.ಆದರೆ ರಾತ್ರೋರಾತ್ರಿ ನೆಲಸಮಮಾಡಿರುವ ಹಿಂದೆ ಕಾಣದ ಕೈಗಳ(2ನೇಪುಟಕ್ಕೆ)

## ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ ಮಧ್ಯಾರಾಧನೆ

ಯುವ ಮಾರ್ಗ ಸುದ್ದಿ

**ಮಾನ್ವಿ,ಆ.11–** ಪಟ್ಟಣದ ಶ್ರೀ ಮಂತ್ರಾಲಯ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಸೋಮವಾರ ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 354 ನೇ ಆರಾಧನಾ ಮಹೋತ್ಸವದ ಮಧ್ಯಾರಾಧನೆ ಅಂಗವಾಗಿ ಶ್ರೀ ರಾಘವೇಂದ್ರ ಸ್ವಾಮಿಗಳವರ ಮೃತಿಕ ವೃಂದಾವನಕ್ಕೆ ಬೆಳಿಗ್ಗೆ ಸುಪ್ರಭಾತ ಸೇವೆ, ಅಷ್ಟೋತ್ತರ ಪಾರಾಯಣ, ಫಲಪಂಚಾಮೃತಾಭೀಷೇಕ, ಕನಕಾಭಿಷೇಕ, ಅರ್ಚನೆ, ಅಲಂಕಾರ ಹಸ್ತೋದಕ, ಮಹಾಮಂಗಳಾರತಿ ನಡೆಯಿತು.

ಸಂಜೆ ವಿವಿಧ ಭಜನಾ ಮಂಡಳಿಯವರಿಂದ



ಭಜನೆ,ಸ್ವಸ್ತಿವಾಚನ,ಮಹಾಮಂಗಳಾರತಿ, ಶ್ರೇಯ ಪ್ರಾರ್ಥನೆ ನೇರವೇರಿಸಲಾಯಿತು ಮದ್ಯಾರಾಧನೆ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು ಭಾಗವಹಿಸಿದರು.

## ಇಂದು ಖಾಸಗಿ ಶಾಲಾ,ಕಾಲೇಜುಗಳು ಬಂದ್ ಮಾಡಿ ರಾಯಚೂರಿನಲ್ಲಿ ಬೃಹತ್ ಪ್ರತಿಭಟನೆ: ಹೆಚ್.ಶರ್ಫುದ್ದೀನ್ ಪೋತ್ನಾಳ್

ಯುವ ಮಾರ್ಗ ಸುದ್ದಿ

**ಮಾನ್ವಿ,ಆ.11–** ರಾಜ್ಯ ಸರ್ಕಾರವು ಖಾಸಗಿ ಶಿಕ್ಷಣ ಸಂಸ್ಥೆಗಳ ಬಗ್ಗೆ ಅನುಸರಿಸುತ್ತಿರುವ ವಿರೋಧಿ ನೀತಿ ನಿಯಮಗಳು ಹಾಗೂ ದಿನಕ್ಕೊಂದು ಆದೇಶಗಳು ಜಾರಿ ಸೇರಿದಂತೆ ಇನ್ನಿತರ ನಿಯಮಗಳಿಂದಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಅನುಭವಿಸುತ್ತಿರುವ ಸಂಕಷ್ಟಗಳ ಪರಿಹಾರಕ್ಕಾಗಿ ಒತ್ತಾಯಿಸಿ ರಾಯಚೂರು ಜಿಲ್ಲೆ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದ ಜಿಲ್ಲೆಯ ಎಲ್ಲಾ ಖಾಸಗಿ ಶಾಲಾ ಕಾಲೇಜುಗಳನ್ನು ಬಂದ್ ಮಾಡಿ ರಾಯಚೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಾನ್ವಿ ತಾಲೂಕ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಹೆಚ್.ಶರ್ಫುದ್ದೀನ್ ಪೋತ್ನಾಳ ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲಾ ತಾಲೂಕುಗಳು ಹಾಗೂ ನಗರ ಗ್ರಾಮೀಣ ಪ್ರದೇಶಗಳಿಂದ ಸುಮಾರು 3,500 ಕ್ಕೂ ಹೆಚ್ಚು ಶಾಲಾ ಕಾಲೇಜುಗಳ ಆಡಳಿತ ಮಂಡಳಿ ಸದಸ್ಯರು, ತಮ್ಮ ತಮ್ಮ ಶಾಲಾ ಕಾಲೇಜುಗಳನ್ನು ಬಂದ್ ಮಾಡಿ ಶಿಕ್ಷಕರು ಮತ್ತು ಉಪನ್ಯಾಸಕರು ಈ ಪ್ರತಿಭಟನೆಗೆ ಬೆಂಬಲ ಸೂಚಿಸಿ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ.

ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ಬಗ್ಗೆ ಅನುಸರಿಸುತ್ತಿರುವ ನಿರ್ಲಕ್ಷ್ಯ ಧೋರಣೆ



ಮುಂದುವರಿಸಿದರೆ ಹೋರಾಟವನ್ನು ತೀವ್ರಗೊಳಿಸಲಾಗುವುದು. ಶಿಕ್ಷಣ ಕ್ಷೇತ್ರ ಉಳಿವಿಗೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಸಿದರು.

ನಾಳೆ ರಾಯಚೂರಿನಲ್ಲಿ ನಡೆಯುವ ಬೃಹತ್ ಪ್ರತಿಭಟನೆ ಮೂಲಕ ಸರ್ಕಾರಕ್ಕೆ ನಮ್ಮ ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ಮಾನ್ಯತೆ ನವೀಕರಣ ವ್ಯವಸ್ಥೆ ಸರಳೀಕರಣ, ಅಗ್ನಿಶಾಮಕ ಸುರಕ್ಷತಾ ಪ್ರಮಾಣ ಪತ್ರ ಪಡೆಯುವ ಪ್ರಕ್ರಿಯೆ ಸುಗಮಗೊಳಿಕೆ.ಕಲ್ಯಾಣ ಕರ್ನಾಟಕ ಭಾಗದ

ಶಾಲಾ ಕಾಲೇಜುಗಳ ಮಾನ್ಯತೆ ಮತ್ತು ನವೀಕರಣದಲ್ಲಿ ಸಾಕಷ್ಟು ಗೊಂದಲಗಳುಳ್ಳ ಅಂಶಗಳು ಒಳಗೊಂಡಿರುತ್ತವೆ. ನವೀಕರಣ ವ್ಯವಸ್ಥೆಗಾಗಿ ಇರುವ ಅಂತರ್ಜಾಲದಲ್ಲಿರುವ ಸರಳೀಕರಣಗೊಳಿಸುವುದು. ಕೆಲವು ಅಂಶಗಳನ್ನು ತೆಗೆದುಹಾಕುವುದು, ಅಗ್ನಿಶಾಮಕ ಸುರಕ್ಷತೆ ಪ್ರಮಾಣ ಪತ್ರ ಪಡೆಯುವುದು ಬಹಳ ಕಷ್ಟದ ಕೆಲಸವಾಗಿದೆ. ಈ ವ್ಯವಸ್ಥೆಯನ್ನು ಸರಳೀಕರಣಗೊಳಿಸಿ ಪ್ರಮಾಣ ಪತ್ರ ನಿಯಮಿತ ಅವಧಿಯಲ್ಲಿ ಶಿಕ್ಷಣ ಸಂಸ್ಥೆಗಳ ಕೈ ಸೇರುವಂತೆ ಕ್ರಮ ಕೈಗೊಳ್ಳುವುದು. ಶೈಕ್ಷಣಿಕವಾಗಿ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗಕ್ಕೆ ಎಲ್ಲಾ ಸೌಕರ್ಯಗಳನ್ನು ನೀಡುವಂತೆ ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಇದುವ ರೆಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. (2ನೇಪುಟಕ್ಕೆ)

ಮೊದಲನೇಯ ಪುಟದಿಂದ

# ಶೇ. 44 ರಷ್ಟು ಸಾಫ್ಟ್‌ವೇರ್ ರಾಜ್ಯದಿಂದಲೇ ರಫ್ತು: ಸಿಎಂ

ಆಗುತ್ತಿದೆ. ಐಐಟಿ ಬೆಂಬಲದ ಮೂಲಕ ಸ್ಟಾಟಫ್ ರೈಲುಗಳ ವೃತ್ತಿ ಪರತೆ ಹಾಗೂ ಸುಧಾರಿತ ಸಂಶೋಧನೆ ಗಮನಹರಿಸಿದ್ದೇವೆ. ಇದರ ಜೊತೆಗೆ ಕೃತಕ ಬುದ್ಧಿಮತ್ತೆಗೆ ಮೂಲಸೌಲಭ್ಯ ಸೌಕರ್ಯ ಕಲ್ಪಿಸುವ ಮೂಲಕ ಹೊಸ ಪ್ರತಿಭೆಗಳತ್ತ ಬೆಳಕು ಚೆಲ್ಲಲು ಸರ್ಕಾರ ಮುಂದಾಗಿದೆ ಎಂದರು.

# ಕನ್ನಡಕ್ಕೆ ಎಲ್ಲವನ್ನೂ ಕೊಡುವ ಶಕ್ತಿ ಇದೆ: ಸವಿತಾ ನಾಗಭೂಷಣ

ಪ್ರಸ್ತಾವಿಕವಾಗಿ ಮಾತನಾಡಿದ ಲೋಹಿಯಾ ಪ್ರಕಾಶನದ ಸಿ.ಚೆನ್ನಬಸವಣ್ಣ, ಬೆಸಗರಳ್ಳಿ ರಾಮಣ್ಣ, ರಾಜಶೇಖರ ನೀರಮಾನ್ವಿ , ಆದವಾನಿಯ ವೀರಭದ್ರ ಅವರ ಕೃತಿಗಳನ್ನು ನಮ್ಮ ಲೋಹಿಯಾ ಪ್ರಕಾಶನದಿಂದ ಪ್ರಕಟಿಸಿದೆ. ಸಾಹಿತ್ಯವಲಯದ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆಂದು ತಿಳಿಸಿದರು. ಅಲ್ಲದೆ ನೀರಮಾನ್ವಿ ಅವರ ಬದುಕು ಬರಹ ಕುರಿತು ತಿಳಿಸುತ್ತ ನೀರಮಾನ್ವಿ ಮತ್ತು ನಾನು ಜೋಡಿ ಎತ್ತುಗಳಂತೆ ಬದುಕಿದೆವು, ಅವರು ಬರೆದ ಕಥೆಗಳನ್ನು ಮುದ್ರಣ ಮಾಡಲು ಯಾವ ಪ್ರಕಾಶಕರು ಮುಂದೆ ಬರದಿದ್ದಾಗ. ನಾನೇ ಲೋಹಿಯಾ ಪ್ರಕಾಶನ ಆರಂಭಿಸಿ ಅದರಿಂದ ಅವರ ಮತ್ತು ಪ್ರಕಾಶನದ "ಕರ್ಪೂರದ ಕಾಯ" ಕಥಾ ಸಂಕಲನ ಪ್ರಕಟಗೊಂಡಿತು ಎಂದು ತಿಳಿಸಿದರು.

ಬೆಸಗರಳ್ಳಿ ರಾಮಣ್ಣ ಪ್ರತಿಷ್ಠಾನದ ಹೆಚ್.ಆರ್.ಸುಜಾತ ಅಧ್ಯಕ್ಷತೆವಹಿಸಿದ್ದರು. ವೇದಿಕೆಯಲ್ಲಿ ಸರ್ವಮಂಗಳ ನೀರಮಾನ್ವಿ, ಬಸವರಾಜೇಶ್ವರಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಸ್.ಜೆ.ವಿ.ಮಹಿಪಾಲ್ ಇದ್ದರು. ದಸ್ತಗೀರ ಸಾಬ್ ದಿನ್ನಿ ಕಾರ್ಯಕ್ರಮ ನಿರೂಪಿಸಿದರು. ಡಾ.ಶಿವಲಿಂಗಪ್ಪ ಹಂದ್ಯಾಳ ವಂದನಾರ್ಪಣೆ ಮಾಡಿದರು.

# ಇಂದು ಖಾಸಗಿ ಶಾಲಾ,ಕಾಲೇಜುಗಳು ಬಂದ್ ಮಾಡಿ ರಾಯಚೂರಿನಲ್ಲಿ ಬೃಹತ್ ಪ್ರತಿಭಟನೆ

ಖಾಸಗಿ ಶಿಕ್ಷಣ ಸಂಸ್ಥೆಗಳಡಿಯಲ್ಲಿ ನಡೆಯುತ್ತಿರುವ ಶಾಲಾ ಕಾಲೇಜುಗಳನ್ನು ವೇತಾನುದಾನಕ್ಕೆ ಒಳಪಡಿಸುವುದು. ಖಾಸಗಿ ಶಾಲಾ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೀಯರ ಸಿಬ್ಬಂದಿಯವರಿಗೆ ಸರ್ಕಾರದ ಅಡಿಯಲ್ಲಿ ಬರುವ ಸರ್ಕಾರದ ಆರೋಗ್ಯ ವಿಮೆ ಯೋಜನೆಗೂಳಪಡಿಸುವುದು. ಖಾಸಗಿ ಶಾಲಾ ಕಾಲೇಜುಗಳ ಮಾನ್ಯತಾ ನವೀಕರಣ ಸಮಯದಲ್ಲಿ ಈಗಾಗಲೇ ಶಾಲಾ ಕಾಲೇಜು ಕಟ್ಟಡ ಹೊಂದಿರುವ ವಿದ್ಯಾ ಸಂಸ್ಥೆಗಳಿಗೆ ವಿಧಿಸಿರುವ ಭೂ ಪರಿವರ್ತನ ಷರತ್ತನ್ನು ತೆಗೆದುಹಾಕುವುದು. ಆರ್.ಟಿ.ಇ. ಕಂತುಗಳ ಹಣವು ಮರುಪಾವತಿ ಆಗುವಲ್ಲಿ ಅತ್ಯಂತ ವಿಳಂಬವಾಗುತ್ತಿದೆ. ಕಾರಣ ವಿಳಂಬದ ನೀತಿಯಲ್ಲಿ ಇರುವ ಲೋಪದೋಷಗಳನ್ನು ಸರಿಪಡಿಸಿ, ಸಕಾಲಕ್ಕೆ ಶಾಲೆಗಳಿಗೆ ಆರ್.ಟಿ.ಇ. ಹಣ ಸಂದಾಯವಾಗುವಂತೆ ಕ್ರಮ ಕೈಗೊಳ್ಳುವುದು. ಮತ್ತು ಬಡ ಹಾಗೂ ಹಿಂದುಳಿದ ವರ್ಗಗಳ ಮಕ್ಕಳಿಗೆ ಅನುಕೂಲವಾಗುತ್ತಿದ್ದ ಆರ್.ಟಿ.ಇ. ಇದನ್ನು ಪುನಃ ಪ್ರಾರಂಭಿಸಲು ಕ್ರಮ ಕೈಗೊಳ್ಳುವುದು. ಕಾಲೇಜುಗಳಿಗೆ ಜಿ.ಎಸ್.ಟಿ. ಹಣವನ್ನು ಪಾವತಿಸುವಂತೆ ವಿಶ್ವವಿದ್ಯಾಲಯಗಳ ಮೂಲಕ ನೀಡಿರುವ ನೋಟೀಸುಗಳನ್ನು ಹಿಂಪಡೆದು ಶಿಕ್ಷಣ ಕ್ಷೇತ್ರವನ್ನು ಜಿ.ಎಸ್.ಟಿ. ವ್ಯಾಪ್ತಿಯಿಂದ ಮುಕ್ತಗೊಳಿಸುವುದು. ವಿವಿಧ ಸಂಘಟನೆಗಳು ಹಾಗೂ ವ್ಯಕ್ತಿಗಳು ಅಪರೋಕ್ಷವಾಗಿ ಶಾಲಾ ಕಾಲೇಜುಗಳ ಆಡಳಿತ ಮಂಡಳಿ ಮತ್ತು ಶಿಕ್ಷಕರ ಮೇಲೆ ಅನಾವಶ್ಯಕವಾಗಿ ಹಲ್ಲೆಗಳು ಹಾಗೂ ದೌರ್ಜನ್ಯ ನಡೆಯುತ್ತಿದ್ದು, ಮತ್ತು ಶಾಲಾ ಕಾಲೇಜುಗಳ ಶೈಕ್ಷಣಿಕ ಅವಧಿಯಲ್ಲಿ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪ್ರಮುಖ ಪಾತ್ರ ವಹಿಸುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಅದರಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಬೋಧಕೀಯರ ಸಿಬ್ಬಂದಿಯವರಿಗೆ ಸಂರಕ್ಷಣೆ ಹಿತದೃಷ್ಟಿಯಿಂದ ನೂತನ ಕಾನೂನು ರೂಪಿಸುವುದು. ಶೈಕ್ಷಣಿಕ ವರ್ಷ ಪ್ರಾರಂಭಕ್ಕಿಂತ ಮುಂಚೆ ಪಠ್ಯ ಪುಸ್ತಕಗಳನ್ನು ಒದಗಿಸಲು ಕೆ.ಟಿ.ಬಿ.ಎಸ್. ನಿಂದ ಸಾಧ್ಯವಾಗುತ್ತಿಲ್ಲ. ಇದರಿಂದ ಮಕ್ಕಳ ಕಲಿಕೆಯಲ್ಲಿ ತೊಂದರೆಯಾಗುತ್ತಿದೆ. ಕಾರಣ ಪಠ್ಯ ಪುಸ್ತಕ ಸರಬರಾಜನ್ನು ನಿಗದಿಪಡಿಸಿದ ಬೆಲೆಯಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಾಗುವಂತೆ ಕ್ರಮ ವಹಿಸುವುದು. ಚುನಾವಣೆ ಮತ್ತು ಸರ್ಕಾರದ ಅವಶ್ಯಕತೆಗನುಗುಣವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳ ಶಾಲಾ ವಾಹನಗಳನ್ನು ಜಿಲ್ಲಾಧಿಕಾರಿಗಳು ಬಳಸಿಕೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ನಾವು ಸಹಕರಿಸಲು ಸಿದ್ದರಿದ್ದೇವೆ. ಆದರೆ ಅಂತಹ ಸಂದರ್ಭಗಳಲ್ಲಿ ಕೆ.ಎಸ್.ಆರ್.ಟಿ.ಸಿ. ವಾಹನಗಳಿಗೆ ಪಾವತಿಸುವ ರೀತಿಯಲ್ಲಿಯೇ ಬಾಡಿಗೆ ಮತ್ತು ಭತ್ಯೆ ಕೊಡಲು ಸೂಕ್ತ ಕ್ರಮ ಕೈಗೊಳ್ಳುವುದು ಸೇರಿದಂತೆ ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಲಾಗುತ್ತದೆ ಎಂದು ಹೆಚ್.ಶರ್ಫುದ್ದೀನ್ ಪೋತ್ನಾಳ ತಿಳಿಸಿದ್ದಾರೆ. ನಾಳೆ ಬೆಳಿಗ್ಗೆ 10.30 ಗಂ.ಗೆ ರಾಯಚೂರಿನಲ್ಲಿ ನಡೆಯುವ ಪ್ರತಿಭಟನಾ ಜಾಥದಲ್ಲಿ ರಾಯಚೂರು ಜಿಲ್ಲೆ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದ ಶಾಲಾ ಕಾಲೇಜುಗಳು ಅನುಭವಿಸುತ್ತಿರುವ ತೊಂದರೆಗಳ ಕುರಿತು ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಜಿಲ್ಲಾಮಟ್ಟದ ಶಾಲಾ ಕಾಲೇಜುಗಳ ಆಡಳಿತ ಮಂಡಳಿಯ ಸದಸ್ಯರು. ಶಿಕ್ಷಕರು ಹಾಗೂ ಉಪನ್ಯಾಸಕರು, ಗ್ರಾಮೀಣ ವಿಭಾಗದಲ್ಲಿ ನಡೆಯುವ ಖಾಸಗಿ ಶಾಲಾ ಕಾಲೇಜುಗಳ ಆಡಳಿತ ಮಂಡಳಿ ಹಾಗೂ ಶಿಕ್ಷಕರು ಮತ್ತು ಉಪನ್ಯಾಸಕರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮಾನ್ವಿ ತಾಲೂಕ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ಹೆಚ್.ಶರ್ಫುದ್ದೀನ್ ಪೋತ್ನಾಳ ನೀಡಿರುವ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂಕಗಳ ಜೊತೆ ಜೀವನ ಕೌಶಲ್ಯ ಕಲಿಸುವ ಶಿಕ್ಷಣ ಅವಶ್ಯ:ಸಚಿವ ದರ್ಶನಾಪುರ

ಮರೆಯಲೇಬಾರದ ಸಂದೇಶ. ಯಾರಿಗೆ? ಎಲ್ಲರಿಗೆ. ಸಣ್ಣವರು, ದೊಡ್ಡವರು, ಬಲ್ಲಿದರು, ಬಡವರು ಯಾರಾದರೇನು? ಎಂದಿದ್ದಾರೆಎಂದರು.

ಸಂಸ್ಥೆಯ ಸಂಸ್ಥಾಪಕರಾದ ಪ್ರೋ. ಚನ್ನಾರಡ್ಡಿ ಪಾಟೀಲ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ, ನಾಡೋಜ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರ 'ಮುಂಜಾವಿಗೊಂದು ನುಡಿಕಿರಣಗಳ ದರ್ಶನ' ಕುರಿತ ವಿಶೇಷ ಪ್ರವಚನ ಕೇಳುವುದರಿಂದ ಮಕ್ಕಳ ಮನಸ್ಸಿನಲ್ಲಿ ಏಕಾಗ್ರತೆ ಹೆಚ್ಚಾಗಿ, ಗುರಿ ಗಟ್ಟಿಯಾಗಿ ಸಾಧನೆ ಸರಳವಾಗುತ್ತದೆ ಎಂದರು.

ಜಸ್ಟಿಸ್ ಶಿವರಾಜ ವಿ. ಪಾಟೀಲ ಪ್ರತಿಷ್ಠಾನ ಅಧ್ಯಕ್ಷ ಎಸ್.ಎಮ್. ರಡ್ಡಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಕಾರ್ಯಕ್ರಮದಲ್ಲಿ ಡಾ. ಎಸ್.ಬಿ. ಕಾಮರಡ್ಡಿ ಡಾ. ಹೆಚ್. ವೀರಭದ್ರಪ್ಪ, ಡಾ. ರಾಜಶ್ರೀ ವಿಶ್ವನಾಥರಡ್ಡಿ, ಶರಣಪ್ಪ ದೇಸಾಯಿ, ಸಿದ್ರಾಮಪ್ಪ ಗೌಡರು, ಬಸವರಾಜಗೌಡ ಪಾಟೀಲ, ಮಲ್ಲಾರೆಡ್ಡಿ, ಪ್ರಭುಗೌಡ, ಪ್ರಶಾಂತ ಕುಲಕರ್ಣಿ, ವಿನುತಾ ಆರ.ಬಿ., ಕರುಣೇಶ್ ಹಿರೇಮಠ, ಗುರುರಾಜ ಕುಲಕರ್ಣಿ, ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವೀರೇಶ್ ಕುಮಾರ ಮಳಲಿ, ಬಸವರಾಜ ಹೊನ್ನಿಗನೂರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಡಾ. ವಿದ್ಯಾವತಿ ಪಾಟೀಲ ನಿರೂಪಿಸಿದರು.

# ವಿಷ್ಣುವರ್ಧನ ಸಮಾಧಿ ಪುನರ್ ನಿರ್ಮಿಸಿ:ವಿಷ್ಣು ಸೇನಾ ಸಮಿತಿ ಒತ್ತಾಯ

ಕೈವಾಡವಿದೆ. ವಿಷ್ಣುವರ್ಧನ ಜೀವಿತಾವಧಿಯಲ್ಲಿ ಅವರಿಗೆ ಮಾನಸಿಕ ಹಿಂಸೆ ನೀಡಿದರೆ, ಮೃತಪಟ್ಟ ಮೇಲೆ ಅವರ ಅಭಿಮಾನಿಗಳಿಗೆ ನೋವು ಉ0ಟು ಮಾಡ ಲಾಗುತ್ತಿದೆ. ಇ0ಥ ಬೆಳವಣಿಗೆಗಳನ್ನು ಇನ್ನು ಮುಂದೆ ಅಭಿಮಾನಿಗಳು ಸಹಿಸಿಕೊಳ್ಳುವದಿಲ್ಲ.ಚಿತ್ರನಟ ವಿಷ್ಣುವರ್ಧನರ ಕುಟುಂಬ ಸದಸ್ಯರು ಜೊತೆಗೆ ರಾಜ್ಯದ ಅಪಾರ ಅಭಿಮಾನಿಗಳಿಗೆ ತೀರಾ ನೋವುಂಟು ಮಾಡಿದೆ.ಇಂಥ ಸಂದಿಗ್ಧ ಸಂದರ್ಭದಲ್ಲಿ ಚಿತ್ರ ನಟ ಸುದೀಪ, ರಾಜ್ಯ ಸರಕಾರಕ್ಕೆ ಪತ್ರ ಬರೆದು ಸ್ಮಾರಕದ ಮರುನಿರ್ಮಾಣ ಮಾಡುವ ನಿರ್ಧಾರ ಶ್ಲಾಘನೀಯವಾಗಿದೆ. ಕೂಡಲೇ ರಾಜ್ಯ ಸರಕಾರ ಸೂಕ್ತ ನಿರ್ಧಾರ ಕೈಗೊಂಡು ಅಗಲಿದ ಚಿತ್ರನಟನಿಗೆ ಗೌರವ ಸಲ್ಲಿಸಬೇಕೆಂದು ಒತ್ತಾಯಿಸಿದರು. ರಾಜ್ಯ ಸರಕಾರ ಮೌನ ವಹಿಸಿದೇ

ವಿಷ್ಣುವರ್ಧನರ ಸಮಾಧಿಯ ಪುನ ನಿರ್ಮಾಣ ಮಾಡುವದು ಹಾಗೂ ಧ್ವಂಸ ಮಾಡಿರುವ ಕಿಡಿಗೇಡಿಗಳ ಮೇಲೆ ಕಾನೂನು ಕ್ರಮಕೈಗೊಳ್ಳಬೇಕೆಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ. ಈ ಸಂದರ್ಭದಲ್ಲಿ ವಿಷ್ಣು ಸೇನಾ ಸಮಿತಿ ಅಧ್ಯಕ್ಷ ಅಯ್ಯಣ್ಣ ಕಟ್ಟಿಮನಿ, ಪ್ರಧಾನ ಕಾರ್ಯದರ್ಶಿ ನಿರಂಜನ ಮಸರಕಲ್, ಪುರಸಭೆ ಸದಸ್ಯ ಶೇಖ್ ಮುನ್ನಾಭೈ,ಎಂಆರ್ ಹೆಚ್‌ಎಸ್ ಅಧ್ಯಕ್ಷ ಹನುಮಂತಪ್ಪ ಮನ್ನಾಪೂರಿ,ಅಟೋ ಚಾಲಕರ ಸಂಘದ ಅಧ್ಯಕ್ಷ ರಫೀ, ವಿವಿಧ ಸಂಘಟನೆಗಳ ಹನುಮಯ್ಯ, ನಾಗರಾಜ ನಾಯಕ ಮಜಿಗಿ, ಪರುಶುರಾಮ, ಮಲ್ಲಯ್ಯ, ಚ0ದ್ರು ಗೌರಂಪೇಟ, ಕ್ರಾಂತಿಕುಮಾರ, ತಿರುಪತಿ ,ಬಸವರಾಜ ಮುಖಂಡರಾದ ಹಡಪದ, ಆ0ಜನೇಯ ನಾಯಕ,ಸುಂದರೇಶ ಅಂಜಳ, ಶಿವನಗೌಡ ನಾಯಕ ನಗರಗುಂಡ ಇದ್ದರು

# ಸಿರವಾರ ಸಂಜೀವಿನಿ ಟ್ರಸ್ಟ್ ಹಾಗೂ ಸಮೂದಾಯ ಆರೋಗ್ಯ ಕೇಂದ್ರ ಸಂಯುಕ್ತಾಶ್ರಯದಲ್ಲಿ ವ್ಯಸನ ಮುಕ್ತ ಕರ್ನಾಟಕ ಅಭಿಯಾನ

ಯುವ ಮಾರ್ಗ ಸುದ್ದಿ



**ಸಿರವಾರ, ಆ.11**–ಸಮಾಜ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರಬಹಳ ಮುಖ್ಯ. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಮತ್ತು ಸಮಾಜದಲ್ಲಿ ವ್ಯಸನಗಳನ್ನು ದೂರವಿಡಲು ಶ್ರಮಿಸಬೇಕು.ಶಾಲಾ–ಕಾಲೇಜುಗಳಲ್ಲಿ ವ್ಯಸನಗಳ ಬಗ್ಗೆ ಅರಿವು ಮೂಡಿಸುವ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಬೇಕು.ಇಂತಹ ಕಾರ್ಯಕ್ರಮ ಆಯೋಜನೆ ಮಾಡಿದ ಸಂಜೀವಿನಿ ಟ್ರಸ್ಟ್ ಹಾಗೂ ಸಮೂದಾಯ ಆರೋಗ್ಯ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದು ಉತ್ತಮ ಕಾರ್ಯ ಎಂದು ತಹಶಿಲ್ದಾರ ಅಶೋಕ ಪವಾರ್ ಹೇಳಿದರು. ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸಂಜೀವಿನಿ ಟ್ರಸ್ಟ್ ಸಿರವಾರ ಹಾಗೂ ಸಮೂದಾಯ ಆರೋಗ್ಯಕೇಂದ್ರ ಸಂಯುಕ್ತಾಶ್ರಯದಲ್ಲಿ ವ್ಯಸನ ಮುಕ್ತ ಕರ್ನಾಟಕ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವ್ಯಸನಗಳಿಗೆ ಬಲಿಯಾಗುತ್ತಿರುವವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಬೇಕು. ವಿದ್ಯಾರ್ಥಿಗಳು ವ್ಯಸನ ಮುಕ್ತ ಸಮಾಜ ನಿರ್ಮಾಣದಲ್ಲಿ ಪಾಲ್ಗೊಳ್ಳುವುದು ವ್ಯಸನಗಳ ಬಗ್ಗೆ ಅರಿವು ಮೂಡಿಸುವುದು ಪ್ರತಿಯೊಬ್ಬ ವಿದ್ಯಾವಂತರ ಕರ್ತವ್ಯ, ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಲ್ಲಿ ಮತ್ತು ಸಮಾಜದಲ್ಲಿ ವ್ಯಸನಗಳ ಹಾನಿಕಾರಕ ಪರಿಣಾಮಗಳ ಬಗ್ಗೆ ಅರಿವು ಮೂಡಿಸ ಬೇಕು.ವ್ಯಸನಗಳಿಗೆ ಬಲಿಯಾಗುತ್ತಿರುವವರನ್ನು ಸಮಾಜದಿಂದ ದೂರವಿಡುವ ಬದಲು, ಅವರನ್ನು

ಬೆಂಬಲಿಸಿ ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನ ಮಾಡಬೇಕು ಎಂದರು..ನಂತರ ಸಿಪಿಐ ಶಶಿಕಾಂತ ಎಂಮಾತನಾಡಿ ವ್ಯಸನದಬಗ್ಗೆ ದೂರವಿರಬೇಕು,ತಂಬಾಕು ಮದ್ಯಪಾನ, ಸೀಗೆರೆಟ್ ಸೇದುವುದು,ಇವುಗಳನ್ನು ಸೇವೆನೆ ಮಾಡುವುದರಿಂದ ಜೀವನ ಹಾಳಾಗುತ್ತದೆ ಇಂತ,ಕೆಟ್ಟ ಅಭ್ಯಾಸಗಳಿಂದ ದೂರವಿರಿ ಅವರ ಜೀವನ ತುಂಬಾ ಚೆನ್ನಾಗಿ ಇರುತ್ತೆ.ದುಷ್ಟಟಕ್ಕೆ ಬಲಿಯಾಗಬೇಡಿ, ವ್ಯಸನದಿಂದ ಮಾನವರು ದೊಡ್ಡರೋಗಕ್ಕೆ ತುತ್ತಾಗುತ್ತಾರೆ, ಹಾಗೂ ಮೊಬೈಲ್ ಗಳಿಂದ ದುಷ್ಪರಿಣಾಮ ಬೀರುತ್ತದೆ.ಈ ಕೆಟ್ಟ ಅಭ್ಯಾಸಗಳಿಂದ ಕುಟುಂಬದಲ್ಲಿ ತೊಂದರೆಂ ಯಾಗುತ್ತದೆ, ಮೆಡಿಟೆಷನ್ ಮಾಡುವುದು ತುಂಬಾ ಅವಶ್ಯಕ ಮೆಡಿಟೇಷನ್ ಮಾಡುವುದರಿಂದ ಆರೋಗ್ಯ ಉತ್ತಮವಾಗಿ ಇರುತ್ತದೆ. ಡಾ.ಸುನೀಲ್ ಸರೋದೆ ಮದ್ಯಪಾನ–ಧೂಮಪಾನ ದಿಂದ ಆಗುವ ತೊಂದರೆ, ನಿವಾರಣೆ ಕುರಿತು ವಿದ್ಯಾರ್ಥಿಗಳಿಗೆ ಹೇಳಿದರು. ಸಂಜೀವಿನಿ ಟ್ರಸ್ಟ್ ಅಧ್ಯಕ್ಷ ಜ್ಞಾನಮಿತ್ರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಚಾರ್ಯರಾದ ಹನುಮಂತ ಚನ್ನೂರು ಇದರು.

# ಪ.ಪಂಚಾಯತಿಯಲ್ಲಿ ಕಾಯಕ ಯೋಗಿ ನೂಲಿ ಚಂದಯ್ಯ ಜಯಂತಿ ಆಚರಣೆ

ಯುವ ಮಾರ್ಗ ಸುದ್ದಿ



**ಸಿರವಾರ, ಆ.11** –ಪಟ್ಟಣ ಪಂಚಾಯತಯಲ್ಲಿಶ್ರೀಕಾಯಕನೂಲಿಯ ಚಂದಯ್ಯ ನವರ ಜಯಂತಿಯನ್ನು ಭಾವಚಿತ್ರಪೂಜೆ ಸಲ್ಲಿಸುವ ಮೂಲಕ ಅಚರಿಸಲಾಯಿತು. ಪ.ಪಂಚಾಯತಿ ಅಧ್ಯಕ್ಷರಾದ ವೈ. ಭೂಪನ ಗೌಡ ಮಾತನಾಡಿ ರಾಜ್ಯದಲ್ಲಿ ಕೊರಮ, ಕೊರಚ ಸಮುದಾಯಕ್ಕೆ ಸೇರಿದ ಲಕ್ಷಾಂತರ ಮಂದಿ ಇದ್ದು, 12ನೇ ಶತಮಾನದ ಬಸವಾದಿ ಪ್ರಮಥರ ಸಮಕಾಲೀನ ಶಿವಶರಣ, ಕಾಯಕ ಸದ್ಭಾವಿ, ಸರ್ವಶ್ರೇಷ್ಠ ಶಿವಶರಣ

ನುಲಿಯ ಚಂದಯ್ಯ ಎಂದರು. ಸದಸ್ಯ ಮಾರ್ಕಪ್ಪ ಮಾತನಾಡಿ ಮೂಲತಃ ವಿಜಯಪುರ ಜಿಲ್ಲೆ ಹಿರೇಶಿವಣಗಿಯಲ್ಲಿ ಕ್ರಿ.ಶ.1107ರಲ್ಲಿ ಜನಿಸಿದ ನುಲಿಯ ಚಂದಯ್ಯ, ಬಸವಣ್ಣನವರ ವಿಚಾರಧಾರೆಯಿಂದ ಪ್ರಭಾವಿತರಾಗಿ ಕ್ರಿ.ಶ.1160ರಲ್ಲಿ ಕಲ್ಯಾಣದ ಶಿವಾನುಭವ ಮಂಟಪಕ್ಕೆ ಸೇರಿದರು. ನಂತರ ಕಲ್ಯಾಣದಲ್ಲಾದ ರ ಕಲ್ಯಾಣದಲ್ಲಾದ ರಾಜಕೀಯ ವಿಪ್ಲವದಿಂದ ತಮ್ಮ ವಚನಸಾಹಿತ್ಯದ ಕಟ್ಟನ್ನು ಹೆಗಲಿಕೆ ಕಟ್ಟಿಕೊಂಡು ಅಕ್ಕ ನಾಗಲಾಂಬಿಕೆ ಜತೆಗೆ ತರೀಕೆರೆ ಸಮೀಪದಎಣ್ಣೆಹೊಳೆ ಬಳಿ ಆಗಮಿಸಿದ್ದರು ಎಂದರು. ಸದಸ್ಯರಾದ ಕೃಷ್ಣನಾ ಯಕ ಸಂದೀಪ್ ಪಾಟೀಲ್ ಮಾತನಾಡಿದರು. ಉಪಾಧ್ಯಕ್ಷರಾದ ಲಕ್ಷ್ಮಿ ಆದ್ಯಪ್ಪ ಸದಸ್ಯರಾದ ಅಸೆನ್‌ಅಲಿ ಸಾಬ, ಮೌಲಸಾಬು ವರ್ಚಸ್ ಮಲ್ಲಪ್ಪ ವಿನಯ ಕೂಮರ್ ನಾಗರಾಜ, ಜಿಕೆ ಭಜಂತ್ರಿ,ಪೈ ರಕ್ಷಣೆ ವೆದಿಕೆಯ ಯಮುನೂರ ಪಂಚಯತಿಯ ಹಂಪಯ್ಯ ಪಾಟೀಲ್ ಸಚೀನ್ ಚ್ಯಾಗಿ ಹಾಗೂ ನೂಲಿಯ ಸಮಜದ ಎಲ್ಲಾ ಮುಖಂಡರು ಇನ್ನೂ ಇತರರು ಇದ್ದರು.

# ಹಿರಿಯ ಸಾಹಿತಿ ಶರಣೇಗೌಡ ಯರದೊಡ್ಡಿ ರವರ 73ನೇ ಜನ್ಮದಿನೋತ್ಸವ

ಯುವ ಮಾರ್ಗ ಸುದ್ದಿ



**ಮಾನ್ವಿ,ಆ.11**– ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಹಿರಿಯ ಸಾಹಿತಿ ಶರಣೆಗೌಡ ಯರದೊಡ್ಡಿ ರವರ 73 ನೇ ಜನ್ಮದಿನೋತ್ಸವ ಹಾಗೂ ಪ್ರೇಮವಾಣಿ ಪ್ರಕಾಶನ ಸಂಸ್ಥೆಯ 48 ನೇ ವಾರ್ಷಿಕೋತ್ಸವ ಮತ್ತು ಪ್ರತಿಭಾ ಪುರಸ್ಕಾರ,ಸಾಧಕರಿಗೆ ಸನ್ಮಾನ ಕಾರ್ಯಮವನ್ನು ಜಿಲ್ಲಾ ಕ.ಸಾ.ಪ.ಗೌರವ ಕಾರ್ಯದರ್ಶಿ ಹಾಗೂ ಹಿರಿಯ ವರದಿಗಾರಾದ ತಾಯಪ್ಪ ಬಿ.ಹೊಸೂರು ಉದ್ಘಾಟಿಸಿ ಮಾತನಾಡಿ ತಾಲೂಕಿನ ಹಿರಿಯ ಸಾಹಿತಿ ಶರಣೆಗೌಡ ಯರದೊಡ್ಡಿ ರವರು ತಮ್ಮ 73 ನೇ ವಯಸ್ಸಿನಲ್ಲಿಯು ಕೂಡ ಸದಾ ಚಟುವಟಿಕೆಯಿಂದ ಕೂಡಿದ ಜೀವನವನ್ನು ನಡೆಸುತ್ತಿರುವ ಇವರು ಇಳಿವಯಸ್ಸಿನಲ್ಲಿಯು ಕೂಡ ತಮ್ಮ ಸಾಹಿತ್ಯ ಕೃಷಿಯನ್ನು ನಡೆಸುವ ಮೂಲಕ ಯುವ ಬರಹಗಾರರಿಗೆ ಸ್ಪೂರ್ತಿಯಾಗಿದ್ದಾರೆ ಇವರು ತಮ್ಮ ಜೀವನದುದ್ದಕ್ಕೂ ಜನಪರವಾದ ಅನೇಕ ಹೋರಾಟಗಳನ್ನು ನಡೆಸುತ್ತ ಬಂದಿರುವ ಇವರು ಸಾಹಿತ್ಯ ಕ್ಷೇತ್ರದ ಅನನ್ಯ ಸಾಧಕರಾಗಿದ್ದಾರೆ. ನಾಡಿನ ಉದ್ದಗಲ್ಲಕೂ ಸಂಚರಿಸಿ ಸಾಹಿತ್ಯದ ಆನೇಕ ಚಟುವಟಿಕೆಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ ಎಂದು ತಿಳಿಸಿದರು.ಕೊಪ್ಪಳದ ಖ್ಯಾತ ಸಂಗೀತ ಕಲಾವಿದರಾದ ಅನ್ನಪೂರ್ಣ ಮನ್ನಾಪೂರ್ ರವರಿಂದ ವಚನ ಗಾಯನ ನಡೆಯಿತು.

ಹಿರಿಯ ಸಾಹಿತಿ ಶರಣೆಗೌಡ ಯರದೊಡ್ಡಿ ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಜಿ.ಪಂ. ಮಾಜಿ ಉಪಧ್ಯಾಕ್ಷರಾದ ಕಿರಿಲಿಂಗಪ್ಪ, ಪೆನ್‌ಖಡ್ಗ ದಿನಪತ್ರಿಕೆಯ ಸಂಪಾದಕರಾದ ಹನುಮಂತ ನಂದಿಹಾಳ್, ಹಿರಿಯ ನ್ಯಾಯಾವಾಧಿಗಳಾದ ಮನೋಹರ್ ವಿಶ್ವಕರ್ಮ , ಚನ್ನಬಸವ ಮಾಡಗಿರಿ ಸೇರಿದಂತೆ ಇನ್ನಿತರರು ಇದ್ದರು.

# ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಯಶಸ್ವಿ :ಡಾ. ವಿಪಿನ್ ಘೋಯಲ್



**ಬೀದರ,ಆ.11**–ಗುರು ನಾನಕ ಆಸ್ಪತ್ರೆಯಲ್ಲಿ ನಡೆದ ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಮಾಡಲಾಯಿತು. ಹೈದ್ರಾಬಾದನ ಹಿರಿಯ ಶಸ್ತ್ರಚಿಕಿತ್ಸಕಆಂಕೋಲಾಜಿಕಲ್ ಡಾ.ವಿಪಿನ್ ಗೋಯಲ್ ಅವರ ನೇತೃತ್ವದಲಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಮಾಡಲಾಯಿತು.

ಬೀದರಜಿಲ್ಲೆಯ ವಿವಿಧ ಪ್ರಾಥಮಿಕಆರೋಗ್ಯ ಕೇಂದ್ರಗಳಲ್ಲಿ ಎರಡು ತಿಂಗಳ ಕಾಲ ರೋಟರಿಕ್ಲಬ್ ಆಫ್ ಸಿಲ್ವರ್ ಸ್ಟಾರ್‌ನಿಂದ 'ಆರೋಗ್ಯಕಣಿ ಮಹಿಳಾ ಆರೋಗ್ಯಜಾಗೃತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.ಈ ಉಪಕ್ರಮವು ಸಮಾಜದ ಆರ್ಥಿಕವಾಗಿದುರ್ಬಲ ವಿಭಾಗದ (ಇಡ ಬ್ಲೂಎಸ್) ಮೇಲೆ ಕೇಂದ್ರೀಕರಿಸಿ ಮತ್ತು ಶಿಬಿರದ ಸಮಯದಲ್ಲಿ ಪರೀಕ್ಷಿಸಲ್ಪಟ್ಟ ಹಲವಾರು ಮಹಿಳೆಯರಿಗೆ ವಾರದಾನವಾಗಿ ಪರಿಣಮಿಸಿತು.

ಗಂಭೀರ ರೋಗಿಗಳನ್ನು ಕಂಡು ಹಿಡಿದುಗುರು ನಾನಕ ಆಸ್ಪತ್ರೆಯಲ್ಲಿ ಸೇರಿಸಿ ಅವರಿಗೆಉಚಿತಶಸ್ತ್ರಚಿಕಿತ್ಸೆ ನೀಡಲಾಗುತ್ತಿದೆ ಎಂದು ಪುನಿತ್ ಸಿಂಗ್ ತಿಳಿಸಿದರು.

ಈ ಸಂದರ್ಭದಲ್ಲಿರೋಟರಿಕ್ಲಬ್ ಆಫ್ ಸಿಲ್ವರ್ ಸ್ಟಾರ್ನಿನ ಮಾಜಿ ಕಾರ್ಯದರ್ಶಿ ಶ್ರೀಮತಿ ಪೂಜಾಜಾರ್ಜಾ, ಯೋಜನಾ ಸೋಯೋಜಕಿಶ್ರೀಮತಿ ಸಹನಾ ಎಸ್. ಪಾಟೀಲ್ ಮತ್ತುಎಲ್ಲಾ ಸದಸ್ಯರುಗಳು ಡಾ.ವಿಪಿನ್ ಅವರಿಗೆ ಕೃತ್ಞತೆ ಸಲ್ಲಿಸಿರು.

ರೋಟರಿಕ್ಲಬ್ ನವರಿಂದ ಹೆಚ್ಚು ಹೆಚ್ಚಾಗಿ ಕ್ಯಾನ್ಸರ್‌ತಡೆಗಟ್ಟುವಿಕೆಗೆ ನಮ್ಮ ಬದ್ಧತೆ ಮತ್ತು ಸಂಕಲ್ಪ ಹೊಂದಿದ್ದೇವೆ ಮತ್ತು ಮುಂದೆಯೂಇಂತಹಉಚಿತ ಕ್ಯಾಂಪ್‌ಗಳು ನಡೆಸೋಣ ಎಂದು ಸಂಕಲ್ಪ ಮಾಡಿದ್ದೇವೆ ಎಂದು ತಿಳಿಸಿದ್ದಾರೆ.

# ಸಚಿವ ಸ್ಥಾನಕ್ಕೆ ಕೆ.ಎನ್.ರಾಜಣ್ಣ ರಾಜೀನಾಮೆ..!



**ಬೆಂಗಳೂರು, ಆ.11–** ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂಬ ವಿಚಾರ ವಿಧಾನಸಭೆಯಲ್ಲಿಂದು ಪ್ರತಿಧ್ವನಿಸಿ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ವಾಕ್ಸಮರಕ್ಕೆ ಎಡೆ ಮಾಡಿಕೊಟ್ಟಿತ್ತು.

ಭೋಜನ ವಿರಾಮದ ನಂತರ ಸದನ ಸಮಾವೇಶಗೊಂಡಾಗ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಮಾಧ್ಯಮಗಳಲ್ಲಿ ರಾಜಣ್ಣ ಅವರು ಸಚಿವ ಸ್ಥಾ ನಕ್ಕೆ ರಾಜೀನಾಮೆ ನೀಡಿದ್ದಾರೆ ಎಂಬ ವಿಚಾರ ವರದಿಯಾಗುತ್ತಿದ್ದೆ. ಈ ಬಗ್ಗೆ ದಟ್ಟವಾದ ವದಂತಿ ಹರಡಿದ್ದು, ಸರ್ಕಾರ ಸ್ಪಷ್ಟಪಡಿಸಿಬೇಕು ಎಂದು ಆಗ್ರಹಿಸಿದರು.

ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ವಾಗ್ವಾದ ನಡೆಯುತ್ತಿದ್ದರೂ ಮೌನವಾಗಿ ಆಲಿಸುತ್ತಿದ್ದ ರಾಜಣ್ಣ ಅವರು, ವಿಪಕ್ಷಗಳ ಶಾಸಕರ ತೀವ್ರ ಆಗ್ರಹಕ್ಕೆ ಮಣಿದು ಮಾತನಾಡಿದರೂ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವುದನ್ನು ಖಚಿತ ಪಡಿಸಲೂ ಇಲ್ಲ, ನಿರಾಕರಿಸಲು ಇಲ್ಲ. ರಾಜಣ್ಣ ಮಾತನಾಡಿ, ಕಾನೂನು ಸಚಿವರು ಮಾತನಾಡಬಾರದು ಎಂದು ಹೇಳಿದ್ದಾರೆ. ವಿಪಕ್ಷ ನಾಯಕರು ನೀವು ಹೇಗೆ ಕುಳಿತ್ತಿದ್ದೀರಿ ಎಂದು ಹೇಳಿದ್ದಾರೆ. ಸಭಾಧ್ಯಕ್ಷರು ಸದನದಲ್ಲಿ ಆಸನ ನಿಗದಿ ಮಾಡಿದ್ದಾರೆ. ನಾನು ಕುಳಿತ್ತಿದ್ದೇನೆ. ನೀವು ಬಳಸಿದ್ದು, ಕೀಳು ಮಟ್ಟದ ಮಾತು ಎಂದು ವಿಪಕ್ಷದ ನಾಯಕರನ್ನುದ್ದೇಶಿಸಿ ಹೇಳಿದರು.

ಅಲ್ಲದೆ, ರಾಜೀನಾಮೆ ಕೊಟ್ಟಿದ್ದೇನೆಯೋ ಅಥವಾ ಬಿಟ್ಟಿದ್ದೇನೆಯೋ? ಕಾನೂನು ಸಚಿವರು ಈಗಾಗಲೇ ಹೇಳಿದ್ದಾರೆ. ಮುಖ್ಯಮಂತ್ರಿ ಸದನದಲ್ಲಿ ಆ ಬಗ್ಗೆ ಹೇಳುತ್ತಾರೆ ಎಂದು. ಅದಕ್ಕೆ ನಾನು ಬದ್ಧ ನಾಗಿದ್ದೇನೆ ಎಂದು ಹೇಳಿದರು.ಆಗ ಅಶೋಕ್ ಮಾತನಾಡಿ, ಮಂತ್ರಿ ಅಲ್ಲದವರು, ಅಲ್ಲಿ ಕೂರಬಾರದು ಎಂದಷ್ಟೇ ಹೇಳಿದೆ. ಸಚಿವರು ಮಾತನಾಡಬಾರದು ಎಂದರೆ, ಕಟ್ಟುಹಾಕಿದ್ದಾರೆಯೇ ಇದು ಪ್ರಜಾಪ್ರಭುತ್ವವೇ ಎಂದು ಪ್ರಶ್ನಿಸಿದರು.

ಆರಂಭದಲ್ಲಿ ಮಾತನಾಡಿದ ಅಶೋಕ್ ಅವರು, ರಾಜಣ್ಣ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ, ಪಕ್ಷದಿಂದ ಅವರನ್ನು ಅಮಾನತ್ತು ಮಾಡಿದ್ದಾರೆ ಎಂಬ ವದಂತಿ ಇದೆ. ಅವರ ಮೇಲೆ ಭ್ರಷ್ಟಾಚಾರದ ಆರೋಪ ಇದೆಯೇ? ಸಚಿವರು ಇಲ್ಲೇ ಇದ್ದಾರೆ. ಪ್ರತಿದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಇದ್ದವರು ಎಂದರು.ಬಿಜೆಪಿ ಶಾಸಕ ಸುರೇಶ್ ಕುಮಾರ್ ಅವರು ಮಾತನಾಡಿ, ಸರ್ಕಾರ ಈ ಸಂಬಂಧ ಹೇಳಿಕೆ ನೀಡಬೇಕು ಎಂದು ಆಗ್ರಹಿಸಿದರು.


ವಿರೋಧ ಪಕ್ಷದ ಉಪ ನಾಯಕ ಅರವಿಂದ್ ಬೆಲ್ಲದ್ ಮಾತನಾಡಿ, ದಲಿತರಿಗೆ ಅನ್ಯಾಯವಾಗುತ್ತಿದೆ. ಆಗ ನಾಗೇಂದ್ರ ಈಗ ರಾಜಣ್ಣ ಎಂದು ಛೇಡಿಸಿದರು.ಮತ್ತೆ ಅಶೋಕ್ ಮಾತನಾಡಿ, ನಾವು ರಾಜೀನಾಮೆ ಕೇಳಿಲ್ಲ. ಮಾಧ್ಯರಮ ಸಂವಿಧಾನದ ನಾಲ್ಕನೇ ಅಂಗ. ಆ ಕಾರಣಕ್ಕಾಗಿ ಸ್ಪಷ್ಟನೆ ಕೇಳುತ್ತಿದ್ದೇವೆ ಎಂದರು.

ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಮಾತನಾಡಿ, ಮಾಧ್ಯರಮದಲ್ಲಿ ಸುದ್ದಿ ಬರುತ್ತಿದೆ ಎಂಬ ಕಾರಣಕ್ಕೆ ಏಕಾಏಕಿ ಹೇಳಿಕೆ ನೀಡುವುದು, ಚರ್ಚೆ ಮಾಡುವುದು ಸರಿಯಾದ ಬೆಳವಣಿಗೆ ಅಲ್ಲ. ಅಂಥಾ ಬೆಳವಣಿಗೆ ಆಗಿದ್ದರೆ, ಮುಖ್ಯಮಂತ್ರಿಗಳು ಸದನಕ್ಕೆ ತಿಳಿಸುತ್ತಾರೆ.ಸುರೇಶ್ ಕುಮಾರ್ ಮಾತನಾಡಿ, ಸಚಿವರು ಸದನದಲ್ಲಿ ಇದ್ದಾರೆ, ಅವರೇ ಸ್ಪಷ್ಟಪಡಿಸಲಿ ಎಂದರು.

ಸುಲಿಕುಮಾರ್ ಸೇರಿದಂತೆ ಹಲವು ಸದಸ್ಯರು ದನಿಗೂಡಿಸಿ ಮಾತನಾಡಿದರು.ಮಾತು ಮುಂದುವರೆಸಿದ ಅಶೋಕ್ ಅವರು ರಾಜಣ್ಣ ಅವರು ರಾಜೀನಾಮೆ ಕೊಟ್ಟಿದ್ದಾರೆ. ಇಲ್ಲವೆಂದರೆ ನನ್ನನ್ನು ಒಂದು ವರ್ಷ ಅಮಾನತ್ತು ಮಾಡಿ. ರಾಜೀನಾಮೆ ಕೊಟ್ಟು ಎರಡು ಗಂಟೆಯಾಗಿದೆ ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ಬಾಬು ಮಾತನಾಡಿ, ಸಚಿವರ ರಾಜೀನಾಮೆ ವಿಚಾರದಲ್ಲಿ ವದಂತಿ ಇದೆ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಿ, ಕಾನೂನು ಸಚಿವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಪ್ರಸ್ತಪಿಸುತ್ತಿದ್ದಾರೆ ಎಂದು ಆರೋಪಿಸಿದಾಗ ವಾಗ್ವಾದ ನಡೆಯಿತು.ಹೆಚ್.ಕೆ.ಪಾಟೀಲ್ ಮಾತನಾಡಿ ಪರಮೇಶ್ವರ್, ಕೃಷ್ಣ ಬೈರೇಗೌಡ, ವೆಂಕಟೇಶ್, ನಾನು ಸಚಿವರಾಗಿರುವಂತೆ ರಾಜಣ್ಣ ಅವರು ಸಚಿವರಾಗಿದ್ದಾರೆ ಎಂದು ಹೇಳಿದರು.

# ಪೋಷಕರ ಒಪ್ಪಿಗೆ ಪಡೆದು ಶಾಲೆಗಳಲ್ಲಿ ಮೊಟ್ಟೆ, ಬಾಳೆಹಣ್ಣು ವಿತರಣೆ : ಮಧು ಬಂಗಾರಪ್ಪ



**ಬೆಂಗಳೂರು,ಆ.11–** ಮಕ್ಕಳಿಗೆ ಇನ್ನು ಮುಂದೆ ಶಾಲೆಯಲ್ಲಿ ಮೊಟ್ಟೆ ಹಾಗೂ ಬಾಳೆಹಣ್ಣು ವಿತರಣೆ ಮಾಡುವ ಸಂಬಂಧ ಪೋಷಕರಿಂದ ಕಡ್ಡಾಯವಾಗಿ ಒಪ್ಪಿಗೆ ಪತ್ರ ಪಡೆದು ತೀರ್ಮಾನ ಮಾಡಲಾಗುತ್ತದೆ ಎಂದು ಶಾಲಾ ಸಾಕ್ಷರತಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಬಿಜೆಪಿ ಸದಸ್ಯ ರವಿಕುಮಾರ್ ಅವರು, ಬಾಳೆಹಣ್ಣು ಮತ್ತು ಮೊಟ್ಟೆ ವಿತರಣೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ವಾರದಲ್ಲಿ ಮೂರು ದಿನ ಮೊಟ್ಟೆ, ಮೂರು ದಿನ ಬಾಳೆಹಣ್ಣು ವಿತರಣೆ ಮಾಡಲಾಗುತ್ತಿದೆ. ಇನ್ನೂ ಕೆಲವು ಕಡೆ ಇದು ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲ ಎಂದು ಆಕ್ಷೇಪಿಸಿದರು.

ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ ಇದಕ್ಕಾಗಿ ಅನುದಾನವನ್ನು ನೀಡುತ್ತಿದೆ. ಎಲ್ಲಾ ಭಾಗಗಳಲ್ಲಿ ಮೊಟ್ಟೆ, ಬಾಳೆಹಣ್ಣು ಹಾಗೂ ಕೆಲವು ಭಾಗಗಳಲ್ಲಿ ಮಾತ್ರ ಹೆಚ್ಚು ದಿನ ಮೊಟ್ಟೆಯನ್ನು ಕೊಡಲಾಗುತ್ತದೆ. ಆದರೆ ಕೆಲವು ಕಡೆ ಇದು ತಾರತಮ್ಯ ನೀತಿಯಿಂದ ಕೂಡಿದೆ ಎಂದು ಸಚಿವರ ಗಮನ ಸೆಳೆದರು. ಇದಕ್ಕೆ ಉತ್ತರಿಸಿದ ಸಚಿವ ಮಧುಬಂಗಾರಪ್ಪ, ಮೊಟ್ಟೆ ಮತ್ತು ಬಾಳೆಹಣ್ಣು ವಿತರಣೆ ಮಾಡುವ ಬಗ್ಗೆ ಕೆಲವು ಕಡೆ ಆಕ್ಷೇಪ ಕೇಳಿಬಂದಿವೆ. ಕೆಲವು ಕಡೆ ಪೋಷಕರು ನಮ ಮಕ್ಕಳು ಮೊಟ್ಟೆ ತಿನ್ನುವುದಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸುತ್ತಾರೆ.

ಹೀಗಾಗಿ ಮುಂದಿನ ದಿನಗಳಲ್ಲಿ ಶಾಲಾ ಪ್ರವೇಶವಾದ ತಕ್ಷಣವೇ ವಿದ್ಯಾರ್ಥಿಗಳ ಪೋಷಕರಿಂದ ಮೊಟ್ಟೆ ತಿನ್ನುವ ಇಲ್ಲವೇ ಬಾಳೆಹಣ್ಣು ತಿನ್ನುವ ಬಗ್ಗೆ ಅನುಮತಿ ಪತ್ರವನ್ನು ಪಡೆಯುತ್ತೆ?ವೆ. ಕೆಲವು ಮಕ್ಕಳಿಗೆ ಮೊಟ್ಟೆ ತಿನ್ನುವುದಕ್ಕೆ ಪೋಷಕರಿಂದ ವಿರೋಧವಿದೆ ಎಂದರು.

ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಸೇರಿದಂತೆ ಕೆಲವು ಭಾಗಗಳಲ್ಲಿ ಮಕ್ಕಳಿಗೆ ಪೌಷ್ಠಿಕಾಂಶದ ಕೊರತೆ ಇರುವುದರಿಂದ ಮೊಟ್ಟೆ ವಿತರಣೆ ಮಾಡುವಂತೆಯೂ ಶಿಕ್ಷಣ ತಜ್ಞರು ಮತ್ತು ವೈದ್ಯರು ಶಿಫಾರಸ್ಸು ಮಾಡಿದ್ದಾರೆ. ಅಂತಿಮವಾಗಿ ಪೋಷಕರ ವಿವೇಚನೆಗೆ ಬಿಡುತ್ತೇವೆ ಎಂದರು.

# ನ.18ರಿಂದ20.ತಂತ್ರಜ್ಞಾನ ಶೃಂಗ ಸಭೆ



**ಬೆಂಗಳೂರು, ಆ. 11–** ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ಇದೇ ನವೆಂಬರ್ 18 ರಿಂದ 20 ರ ವರೆಗೆ ನಡೆಯಲಿದೆ. ಕರ್ನಾಟಕ ರಾಜ್ಯ ಸರ್ಕಾರ ಆಯೋಜಿಸಿರುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ 28ನೇ ಆವೃತ್ತಿಯ ಬಗ್ಗೆ ಸುದ್ದಿಗೋಷ್ಠಿಯಲ್ಲಿಂದು ವಿವರ ನೀಡಿದ ಐಟಿ–ಬಿಟಿ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾದ ಪ್ರಿಯಾಂಕ ಖರ್ಗೆ ಅವರು, ಏಷ್ಯಾದ ಅತಿದೊಡ್ಡ ತಂತ್ರಜ್ಞಾನ ಪ್ರದರ್ಶನವಾದ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ 28ನೇ ಆವೃತ್ತಿ ಬರುವ ನವೆಂಬರ್ 18 ರಿಂದ 20ರ ವರೆಗೂ ನಡೆಯಲಿದೆ ಎಂದರು.ಈ ಬೆಂಗಳೂರು ಟೆಕ್ ಶೃಂಗಸಭೆ–2025ರ ಮೂಲಕ ಬೆಂಗಳೂರು ನಗರ ಮತ್ತೊಮ್ಮೆ ಜಾಗತಿಕ ತಂತ್ರಜ್ಞಾನ, ನಾವೀನ್ಯತೆ ಮತ್ತು ಸಹಭಾಗಿತ್ವದ ಮುಂಚೂಣಿ ಸ್ಥಾನದಲ್ಲಿ ನಿಲ್ಲಲಿದೆ ಎಂದು ಹೇಳಿದರು.

ಬೆಂಗಳೂರಿನ ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಈ ಶೃಂಗಸಭೆ ನಡೆಯಲಿದ್ದು, ಶೃಂಗಸಭೆಯಲ್ಲಿ 20 ಸಾವಿರಕ್ಕೂ ಹೆಚ್ಚು ಸಾರ್ಟಪ್‌ಗಳ ಸಂಸ್ಥಾಪಕರುಗಳು, ಸಾವಿರಕ್ಕೂ ಹೆಚ್ಚು ಹೂಡಿಕೆದಾರರು, 15 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದು, ತಂತ್ರಜ್ಞಾನ ಕ್ಷೇತ್ರದ 600ಕ್ಕೂ ಹೆಚ್ಚು ಪರಿಣಿತರು ಭಾಷಣ, ಉಪನ್ಯಾಸ ನೀಡುವರು ಎಂದು ಹೇಳಿದರು.

ಈ ಬೆಂಗಳೂರು ತಂತ್ರಜ್ಞಾನ ಸಭೆಯಲ್ಲಿ 1200ಕ್ಕೂ ಹೆಚ್ಚು ಪ್ರದರ್ಶಕರು ಭಾಗಿಯಾಗಲಿದ್ದು, 1 ಲಕ್ಷಕ್ಕೂ ಹೆಚ್ಚು ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಹೇಳಿದರು. ಈ ತಂತ್ರಜ್ಞಾನ ಶೃಂಗಸಭೆಯಲ್ಲಿ 100ಕ್ಕೂ ಹೆಚ್ಚು ಜ್ಞಾನಾಧಾರಿತ ಉಪನ್ಯಾಸಗಳು, 5 ಸಾವಿರಕ್ಕೂ ಹೆಚ್ಚು ಕ್ಯೂರೇಟೆಡ್ ಸಭೆಗಳು ನಡೆಯಲಿದ್ದು, 60ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗಿಯಾಗುವರು ಎಂದರು.

ಭಾರತದ ಎಲ್ಲ ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು ಪಾಲ್ಗೊಳ್ಳುತ್ತಿದ್ದು, ಈ ಬಾರಿಯ ಬಿಟಿಎಸ್–2025 ರ ವಿಷಯ ಫ್ಯೂಚರೈಸ್ ಆಗಿದೆ. ಇದು ಮುಂದಿನ ದಶಕಗಳನ್ನು ರೂಪಿಸುವ ತಂತ್ರಜ್ಞಾನ ಪರಿಸರ ವ್ಯವಸ್ಥೆಯ ವೈವಿಧ್ಯಮಯ ವಲಯಗಳಲ್ಲಿ ರೂಪಾಂತರಕ್ಕೆ ಚಾಲನೆ ನೀಡುವ ತಂತ್ರಜ್ಞಾನಗಳನ್ನು ಕಲ್ಪಿಸಲು, ನಾವಿನ್ಯತೆಯನ್ನು ಒದಗಿಸಲು ಮತ್ತು ಅವುಗಳನ್ನು ಕಾರ್ಯಗತಗೊಳಿಸುವ ಕ್ರಿಯೆಗೆ ಒಂದು ಪ್ರಬಲವಾದ ಆಹ್ವಾನವನ್ನು ನೀಡುತ್ತದೆ ಎಂದು ಸಚಿವ ಪ್ರಿಯಾಂಕ ಖರ್ಗೆ ಹೇಳಿದರು.ಈ ಬಾರಿಯ ಪ್ರದರ್ಶನವು ಎಂದಿಗಿಂತಲೂ ದೊಡ್ಡಮಟ್ಟದಲ್ಲಿ ಇರಲಿದ್ದು, ಹಲವಾರು ಪೆವಿಲಿಯನ್‌ಗಳಲ್ಲಿ ನಾವೀನ್ಯತೆ, ಸಹಭಾಗಿತ್ವ, ವಾಣಿಜ್ಯ ವಲಯಗಳಲ್ಲಿನ ಆವಿಷ್ಕಾರಗಳ ಪ್ರದರ್ಶನವಾಗಲಿದೆ ಎಂದರು.

ಈ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ ಅಂಗವಾಗಿ ಇಂದು ಬೆಳಿಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 200ಕ್ಕೂ ಹೆಚ್ಚು ಉನ್ನತ ಮಟ್ಟದ ಸಂಸ್ಥೆಗಳ ಸಿಇಓಗಳೊಂದಿಗೆ ಉಪಹಾರ ಸಭೆಯನ್ನು ನಡೆಸಿ, ಬೆಂಗಳೂರು ಟೆಕ್ ಶೃಂಗಸಭೆ–2025ನ್ನು ಔಪಚಾರಿಕವಾಗಿ ಘೋಷಣೆ ಮಾಡಲು ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕರ್ನಾಟಕ ತನ್ನ ನಾಯಕತ್ವ ಸ್ಥಾನವನ್ನು ಮುಂದುವರೆಸಲು ತೆಗೆದುಕೊಳ್ಳಬೇಕಾದ ಅಗತ್ಯ ಪ್ರಮುಖ ಕಾರ್ಯತಂತ್ರಗಳು ಮತ್ತು ಉಪಕ್ರಮಗಳ ಕುರಿತು ಚರ್ಚೆ ನಡೆಸಿದರು.

# ಸರ್ಕಾರದ ವೈಫಲ್ಯದ ವಿರುದ್ಧ ಬಿಜೆಪಿ–ಜೆಡಿಎಸ್ ಶಾಸಕರ ಪ್ರತಿಭಟನೆ



**ಬೆಂಗಳೂರು,ಆ.11–** ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತ ದುರಂತದ ನೈತಿಕ ಹೊಣೆಯನ್ನು ರಾಜ್ಯಸರ್ಕಾರ ಹೊರಬೇಕು ಎಂದು ಆಗ್ರಹಿಸಿ ಬಿಜೆಪಿ, ಜೆಡಿಎಸ್ ಶಾಸಕರು ವಿಧಾನಸೌಧದ ಆವರಣದಲ್ಲಿರುವ ಮಹಾತಗಾಂಧೀಜಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಮಳೆಗಾಲದ ಅಧಿವೇಶನದ ಮೊದಲ ದಿನವಾದ ಇಂದು ಉಭಯ ಪಕ್ಷಗಳ ಶಾಸಕರು ಗಾಂಧಿ ಪ್ರತಿಮೆ ಬಳಿ ಸರ್ಕಾರದ ವಿರುದ್ಧ ಘೋಷಣೆಯುಳ್ಳ ಫಲಕಗಳನ್ನು ಪ್ರದರ್ಶಿಸಿ ಪ್ರತಿಭಟನೆ ಮಾಡಿದ್ದಲ್ಲದೆ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ, ಜೆಡಿಎಸ್ ಜಂಟಿ ಪ್ರತಿಭಟನೆ ನಡೆಸಿದ್ದು, ಸದನದಲ್ಲೂ ಸರ್ಕಾರದ ವಿರುದ್ಧ ಹೋರಾಟ ನಡೆಸುವುದಾಗಿ ಉಭಯ ಪಕ್ಷಗಳ ನಾಯಕರು ಘೋಷಿಸಿದರು. ಪ್ರತಿಭಟನೆ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ.ವಿಜಯೇಂದ್ರ, ಜೆಡಿಎಸ್ ಮತ್ತು ಬಿಜೆಪಿ ಶಾಸಕರು ಅಧಿವೇಶನದ ಮೊದಲ ದಿನವೇ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದೇವೆ. ಸದನದಲ್ಲೂ ನಾವು ಹೋರಾಟ ಮಾಡುತ್ತೇವೆ ಎಂದರು. ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರಿಡಾಂಗಣದಲ್ಲಿ ನಡೆದ ಕಾಲ್ತುಳಿತದ ಪ್ರಕರಣದ ಜವಾಬ್ದಾರಿಯನ್ನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹೊರಬೇಕು. ಜವಾಬ್ದಾರಿಯಿಂದ ನುಣಚಿಕೊಳ್ಳಲು ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ರಸಗೊಬ್ಬರದ ಕೊರತೆ ಉಂಟಾಗಿದ್ದು ರೈತರು ಪ್ರತಿಭಟನೆ ನಡೆಸಿ ಹೋರಾಟ ಮಾಡುತ್ತಿದ್ದಾರೆ, ಉತ್ತರ ಕರ್ನಾಟಕದ ನೀರಾವರಿ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತಿಲ್ಲ, ಪೊಲೀಸ್ ಸಬ್‌ಇನ್‌ಪೆಕ್ಟರ್ ನೇಮಕಾತಿ ಪೂರ್ಣಗೊಂಡಿದ್ದರೂ ನೇಮಕಾತಿ ಆದೇಶ ನೀಡುತ್ತಿಲ್ಲ, ರಾಜ್ಯದಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇವೆ, ಆದರೂ ನೇಮಕಾತಿ ಮಾಡುತ್ತಿಲ್ಲ, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಸದನದ ಒಳ–ಹೊರಗು ಉಭಯಪಕ್ಷಗಳಿಂದ ಹೋರಾಟ ಮಾಡುತ್ತೇವೆ. ಇಂದು ಸಾಂಕೇತಿಕವಾಗಿ ಗಾಂಧಿಪ್ರತಿಮೆ ಬಳಿ ಪ್ರತಿಭಟನೆ ಮಾಡಿದ್ದೇವೆ ಎಂದು ಅವರು ತಿಳಿಸಿದರು.

**60 ಪರ್ಸೆಂಟ್ ಸರ್ಕಾರ :**ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, 60 ಪರ್ಸೆಂಟ್ ಸರ್ಕಾರ ಎಂದು ಕಾಂಗ್ರೆಸ್ ಸರ್ಕಾರ ಬ್ರಾಂಡ್ ಆಗಿದೆ. ಕಾಟಾಚಾರಕ್ಕೆ 9 ದಿನ ಅಧಿವೇಶನ ನಡೆಸಲಾಗುತ್ತಿದೆ. ಕನಿಷ್ಠ 20 ದಿನವಾದರೂ ಅಧಿವೇಶನ ನಡೆಸಬೇಕಿತ್ತು. ಬಿಜೆಪಿ, ಜೆಡಿಎಸ್ ನಾಯಕರು ನಿನ್ನೆ ಸಭೆ ಮಾಡಿದ್ದು, ಸರ್ಕಾರದ ವಿರುದ್ಧ ಹೋರಾಟ ಮಾಡಲು ತೀರ್ಮಾನಿಸಿದ್ದೇವೆ ಎಂದರು.ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಕುಟುಂಬದವರ ಫೋಟೊ ತೆಗೆಸಿಕೊಳ್ಳಲು ಮುಗಿ ಬಿದ್ದರು. ಆದರೆ ಕಾಲ್ತುಳಿತದ ದುರಂತದಲ್ಲಿ 11 ಜನರ ಅಮಾಯಕರ ಸಾವಾಯಿತು. ಅವರ ಕುಟುಂಬದವರು ಫೋಟೊ ಇಟ್ಟು ಪೂಜೆ ಮಾಡುವಂತೆ ಸರ್ಕಾರ ಮಾಡಿತು. ಆರ್‌ಸಿಬಿ ವಿಜಯೋತ್ಸವದ ಕಾಲ್ತುಳಿದ ಪ್ರಕರಣ ಸರ್ಕಾರದ ಪ್ರಾಯೋಜಿತ ಕೊಲೆ ಎಂದು ಅವರು ಆರೋಪಿಸಿದರು. ಕಾಲ್ತುಳಿತ ಸಂಭವಿಸಿದ್ದರೂ ಮುಖ್ಯಮಂತ್ರಿ ದೋಸೆ ತಿನ್ನಲು ಹೋಗಿದ್ದರು. ಉಪಮುಖ್ಯಮಂತ್ರಿ ಆರ್‌ಸಿಬಿ ಕಪ್‌ಗೆ ಮುತ್ತಿಕ್ಕುತ್ತಿದ್ದರು. ವಿಧಾನಸೌಧದ ಮುಂದೆ ಕಾನೂನು ಸುವ್ಯವಸ್ಥೆ ಕಾಪಾಡಲಾಗದವರು ರಾಜ್ಯದಲ್ಲಿ ಕಾನೂನು ಕಾಪಾಡುತ್ತಾರೆಯೇ? ಎಂದು ಪ್ರಶ್ನಿಸಿದರು. ಕಾಲ್ತುಳಿತದಲ್ಲಿ ಮೃತಪಟ್ಟ 11 ಜನರ ಸಾವಿಗೆ ನ್ಯಾಯ ಕೇಳಲು ಸದನದಲ್ಲಿ ಹೋರಾಟ ಮಾಡುತ್ತೇವೆ. ದಲಿತರ ಜಮೀನು ಉಳಿಸಬೇಕಿದೆ. ರೈತರಿಗೂ ತೊಂದರೆ ಆಗುತ್ತಿದೆ ಎಂದು ಆಪಾದಿಸಿದರು.

ವಿಧಾನಪರಿಷತ್‌ನ ಜೆಡಿಎಸ್ ನಾಯಕ ಎಸ್.ಎಲ್.ಭೋಜೇಗೌಡ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದೆಯೋ, ಇಲ್ಲವೋ ಎಂಬ ಪರಿಸ್ಥಿತಿ ಇದೆ ಎಂಬ ಬಗ್ಗೆ ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದಾರೆ. ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಕ್ರಿಡಾಂಗಣದ ಬಳಿ ಉಂಟಾದ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಸುದ್ದಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳಿಗೆ ಗೊತ್ತಿತ್ತು. ವಿಧಾನಸೌಧದ ಮುಂಭಾಗದಲ್ಲಿ ಕಾರ್ಯಕ್ರಮ ನಿಗಧಿತ ಸಮಯಕ್ಕಿಂತ ತಡವಾಗಿ ಆರಂಭವಾಯಿತು. ಆದರೆ ಮುಖ್ಯಮಂತ್ರಿ ವಿಧಾನಸೌಧದ ಆವರಣದಲ್ಲಿ ಕಾಲ್ತುಳಿತ ನಡೆದಿರಲಿಲ್ಲ ಎಂದು ಹೇಳಿರುವುದು ಅಕ್ಷಮ್ಯ. ಕ್ರಿಡಾಂಗಣದಲ್ಲಿ ನಡೆದ ದುರಂತಕ್ಕೂ, ನಮಗೂ ಸಂಬಂಧವಿಲ್ಲ ಎಂದು ಹಾರಿಕೆ ಉತ್ತರ ನೀಡಿದ್ದು ತರವಲ್ಲ. ಅಧಿಕಾರಿಗಳನ್ನು ಅಮಾನತು ಮಾಡಿದರೆ ಸಾಲದು, ಇದರ ನೈತಿಕ ಹೊಣೆಯನ್ನು ಸಿಎಂ, ಡಿಸಿಎಂ ಹೊರಬೇಕು. ದುರಂತಕ್ಕೆ ಕಾರಣದವರಿಗೆ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದರು.

ವಿಧಾನಪರಿಷತ್‌ನ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ, ಆರ್‌ಸಿಬಿ ವಿಜಯೋತ್ಸವ ಕ್ರೆಡಿಟ್ ತೆಗೆದುಕೊಳ್ಳಲು ಸರ್ಕಾರ ಮುಂದಾಗಿ ದುರಂತಕ್ಕೆ ಕಾರಣವಾಯಿತು. ಆರ್‌ಸಿಬಿದು ಕಪ್ ಆದರೆ ಸರ್ಕಾರದ್ದು ತಪ್ಪು. ಸಡಗರ ಸಂಭ್ರಮಿಸಲು ಹೋಗಿ 11 ಜನರ ಸಾವಿಗೆ ಕಾರಣವಾಯಿತು. 5 ಅಧಿಕಾರಿಗಳನ್ನು ದುರಂತದ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿತ್ತು. ಈ ಬಗ್ಗೆ ಸರ್ಕಾರ ಸಮರ್ಪಕ ಉತ್ತರ ಕೊಡಬೇಕು. 11 ಜನರ ಸಾವಿಗೆ ನ್ಯಾಯ ಕೊಡಬೇಕು.

ಅರಣ್ಯದ ಹೆಸರಿನಲ್ಲಿ ದಲಿತರು, ರೈತರಿಗೆ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸಬೇಕು. ಭ್ರಷ್ಟಾಚಾರದಲ್ಲಿ ಸರ್ಕಾರ ಮುಳುಗಿದೆ. 60 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಆರೋಪಿಸಿದರು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿವೆ. ಸಾವು–ನೋವುಗಳಾಗುತ್ತಿವೆ. ಈ ಎಲ್ಲಾ ವಿಚಾರಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುತ್ತೇವೆ ಎಂದು ಅವರು ಹೇಳಿದರು.

# ಮತಗಳವು ಇಂಡಿ ಸಮರ



**ನವದೆಹಲಿ, ಆ. 11–** ಮತಗಳ್ಳತನ ನಡೆದಿರುವ ಬಗ್ಗೆ ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಸಮರ ಸಾರಿರುವ ಇಂಡಿಯಾ ಮೈತ್ರಿಕೂಟ ದೆಹಲಿಯಲ್ಲಿಂದು ಬೃಹತ್ ಪ್ರತಿಭಟನೆ ನಡೆಸಿತು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಕೇಂದ್ರ ಚುನಾವಣಾ ಆಯೋಗಕ್ಕೆ ಮುತ್ತಿಗೆ ಹಾಕಲು ಯತ್ನಿಸಿತು. ಈ ವೇಳೆ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಸೇರಿದಂತೆ 30ಕ್ಕೂ ಹೆಚ್ಚು ಸಂಸದರನ್ನು ಪೊಲೀಸರು ವಶಕ್ಕೆ ಪಡೆದರು.

ಮತಗಳುವಿನ ಬಗ್ಗೆ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿದ ಬೆನ್ನಲ್ಲೇ ರಾಹುಲ್ ಗಾಂಧಿ ಮುಂಖಡತ್ವದಲ್ಲಿ ಇಂದು ಸಂಸತ್ ಭವನದಿಂದ ಕೇಂದ್ರ ಚುನಾವಣಾ ಆಯೋಗ ಕಚೇರಿಯವರೆಗೂ ಬೃಹತ್ ಪ್ರತಿಭಟನೆ ನಡೆಸಿ ಮತಗಳ್ಳತನ ವಿರುದ್ಧ ಘೋಷಣೆ ಕೂಗಿ ಇಂಡಿಯಾ ಮೈತ್ರಿಕೂಟ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

25 ಪಕ್ಷಗಳ 300ಕ್ಕೂ ಹೆಚ್ಚು ಸಂಸದರು ಈ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡು ಬಲಪ್ರದರ್ಶನ ನಡೆಸಿದರು. ಸಂಸದರು ಸರ್ಕಾರ ಹಾಗೂ ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಘೋಷಣೆ ಕೂಗುತ್ತಾ ಕೇಂದ್ರ ಚುನಾವಣಾ ಆಯೋಗದ ಮುಂದೆ ಜಮಾಯಿಸಿದರು. ಆದರೆ ಪ್ರತಿಭಟನಾಕಾರರು ಹತ್ತಿಕ್ಕಲು ಪೊಲೀಸರು ಬ್ಯಾರಿಕೇಡ್ ಅಳವಡಿಸಿದರು. ಈ ವೇಳೆ ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್ ಸೇರಿದಂತೆ ಇನ್ನಿತರ ಸಂಸದರು ಬ್ಯಾರಿಕೇಡ್ ಹತ್ತಿ ಚುನಾವಣಾ ಆಯೋಗದ ಕಚೇರಿಯ ಒಳನುಗ್ಗಲು ಯತ್ನಿಸಿದರು. ಈ ಸಂದರ್ಭದಲ್ಲಿ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಭಾರಿ ನೂಕಾಟ, ತಳ್ಳಾಟ, ಜಟಾಪಟಿ ನಡೆದು ನಾಟಕೀಯ ವಿದ್ಯಾಮಾನಕ್ಕೆ ಸಾಕ್ಷಿಯಾಯಿತು.

ಈ ವೇಳೆ ರಾಹುಲ್ ಗಾಂಧಿ, ಅಖಿಲೇಶ್ ಯಾದವ್ ಸೇರಿದಂತೆ ಇಂಡಿಯಾ ಮೈತ್ರಿಕೂಟ ಸಂಸದರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು. ಪ್ರತಿಭಟನೆಗೆ ಅನುಮತಿ ಪಡೆಯದೆ ಹಿನ್ನೆಲೆಯಲ್ಲಿ ಪೊಲೀಸರು ಯಾಲಿಯನ್ನು ತಡೆದಿದ್ದರಿಂದ ಸಂಸದರು ಹಾಗೂ ಕಾಂಗ್ರೆಸ್ ನಾಯಕರು ರಸ್ತೆಯಲ್ಲೇ ಕುಳಿತು ಚುನಾವಣಾ ಆಯೋಗ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.ಈ ಹೋರಾಟ ರಾಜಕೀಯ ಲಾಭಕ್ಕಾಗಿಯಲ್ಲ. ಸಂವಿಧಾನ ರಕ್ಷಣೆಗಾಗಿ ಹೋರಾಟ ಮಾಡುತ್ತಿದ್ದೇವೆ. ಸತ್ಯಾಂಶ ಜನರ ಮುಂದೆ ಇದೆ ಎಂದು ರಾಹುಲ್ ಗಾಂಧಿ ಸುದ್ಧಿಗಾರರಿಗೆ ತಿಳಿಸಿದರು.ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ ಜನರ ಮತದಾನ ಹಕ್ಕನ್ನು ರಕ್ಷಿಸುವ ಸಲುವಾಗಿ ಈ ಹೋರಾಟ ಮಾಡುತ್ತಿದ್ದೇವೆ. ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದೆ ಎಂದು ಕಿಡಿಕಾರಿದರು.

ಕಲಾಪ ಮುಂದೂಡಿಕೆ: ಮತಗಳ್ಳತನ ಹಾಗೂ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಚರ್ಚೆಗೆ ಅವಕಾಶ ನೀಡಬೇಕೆಂದು ಪ್ರತಿಪಕ್ಷಗಳು ಸಂಸತ್ತಿನ ಉಭಯ ಸದನಗಳಲ್ಲಿ ಪ್ರತಿಭಟನೆ ನಡೆಸಿದ್ದರಿಂದ ಎರಡೂ ಸದನಗಳ ಕಲಾಪವನ್ನು ಭೋಜನ ವಿರಾಮದವರೆಗೆ ಮುಂದೂಡಲಾಯಿ ತು.ಲೋಕಸಭ 'ಯಲ್ಲಿಂದು ಕಲಾಪ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷಗಳ ಸದಸ್ಯರು ಮತಗಳ್ಳತನ ಹಾಗೂ ಬಿಹಾರದಲ್ಲಿನ ಮತಪಟ್ಟಿ ಪರಿಷ್ಕರಣೆ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕೆಂದು ಆಗ್ರಹಿಸಿ ಕಲಾಪಕ್ಕೆ ಅಡ್ಡಿಪಡಿಸಿದರು. ಸಭಾಧ್ಯಕ್ಷ ಓಂಬಿರ್ಲಾ ಸುಗಮ ಕಲಾಪಕ್ಕೆ ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು. ಆದರೆ ಪ್ರತಿಪಕ್ಷಗಳ ಸದಸ್ಯರು ಗದ್ದಲ, ಕೋಲಾಹಲ ಎಬ್ಬಿಸಿದ್ದರಿಂದ ಕಲಾಪವನ್ನು ಮುಂದೂಡಿದರು. ಇತ್ತ ರಾಜ್ಯಸಭೆಯಲ್ಲೂ ಪರಿಸ್ಥಿತಿ ವಿಭಿನ್ನವಾಗಿರಲಿಲ್ಲ. ಹೀಗಾಗಿ ಕಲಾಪವನ್ನು ಮಧ್ಯಾಹ್ನದವರೆಗೆ ಮುಂದೂಡಲಾಯಿತು.

## ಯೋಗ ಸನ್ನಿಧಿ ಟ್ರಸ್ಟ್ ವತಿಯಿಂದ ಯೋಗಗುರು ಅನ್ನದಾನಯ್ಯಗೆ ಗೌರವ



ಯುವ ಮಾರ್ಗ ಸುದ್ದಿ

**ಬೆಂಗಳೂರು,ಆ.11–** ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್, ಭಾರತೀಯ ಯೋಗ ಸಂಘ, ಮತ್ತು ಕರ್ನಾಟಕ ರಾಜ್ಯ ಯೋಗ ಸಂಘದ ಸಹಯೋಗದಲ್ಲಿ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಯಚೂರಿನ ಯೋಗಗುರು ಅನ್ನದಾನಯ್ಯ ಅವರನ್ನು ಸನ್ಮಾನಿಸಲಾಯಿತು.

ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆಗಸ್ಟ್ 10, 2025ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಉಚಿತವಾಗಿ ಯೋಗಾಭ್ಯಾಸ ಹೇಳಿಕೊಡುವಂತೆ ಕರೆ ನೀಡಲಾಗಿತ್ತು. ಇದಕ್ಕೆ ಸ್ಪಂದಿಸಿದ ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ ವತಿಯಿಂದ ರಾಯಚೂರು ಜಿಲ್ಲೆಯ ಯೋಗಗುರು ಅನ್ನದಾನಯ್ಯ ಅವರು ಜೂನ್ 1, 2025 ರಿಂದ ಜೂನ್ 17, 2025ರವರೆಗೆ ಒಟ್ಟು 500 ಯೋಗ ಶಿಬಿರಾರ್ಥಿಗಳಿಗೆ ಉಚಿತವಾಗಿ ಯೋಗಾಭ್ಯಾಸ ಹೇಳಿಕೊಡುವ ಮೂಲಕ ಗಮನ ಸೆಳೆದಿದ್ದರು.

ಅನ್ನದಾನಯ್ಯ ಅವರ ಈ ಕಾರ್ಯವನ್ನು ಗುರುತಿಸಿ ಬೆಂಗಳೂರಿನ ಚಾಮರಾಜೇಶ್ವರ ದೇವಸ್ಥಾನದ ಶಿವಪುರಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರನ್ನು "ಯೋಗ ಸಾಧಕ" ಎಂದು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಪೂಜ್ಯ ಜಗದ್ಗುರು ಜಯೇಂದ್ರ ಸ್ವಾಮೀಜಿ, ಹರಿಹರಪುರದ ಸ್ವಯಂ ಪ್ರಕಾಶ ಸಚ್ಚಿದಾನಂದ ಸ್ವಾಮೀಜಿ, ಸ್ವಾಮಿ ವಿವೇಕಾನಂದ ಯೋಗ ಗುರುಗಳಾದ ಎಚ್.ಆರ್. ನಾಗೇಂದ್ರ ಗುರೂಜಿ, ಪತಂಜಲಿಯ ಭವರಲಾಲ್ ಆರ್ಯ, ಸುಬ್ಬು ಭಯ್ಯ, ಎಸ್.ಎನ್. ಓಂಕಾರ್, ಮತ್ತು ನಂದಿನಿ ಶ್ರೀಶ ಮುಂತಾದ ಗಣ್ಯರು ಭಾಗವಹಿಸಿದ್ದರು.

## ಬಸ್–ಕಾರಿನ ಮಧ್ಯೆ ಮುಖಾಮುಖಿ ಡಿಕ್ಕಿ: ತಂದೆ–ಮಗ ಸಾವು



**ಕಲಬುರಗಿ,ಆ.11–** ಎನ್‌ಇಕೆಆರ್‌ಟಿಸಿ ಬಸ್ ಮತ್ತು ಕಾರಿನ ಮಧ್ಯೆ ಮುಖಾಮುಖಿ ಡಿಕ್ಕಿ ಸಂಭವಿಸಿ ಕಾರಿನಲ್ಲಿದ್ದ ತಂದೆ ಮತ್ತು ಮಗ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಅಫಜಲಪುರ ರಾಷ್ಟ್ರೀಯ ಹೆದ್ದಾರಿಯ ಗೊಬ್ಬೂರ (ಕೆ) ಗ್ರಾಮದ ಬಳಿ ರವಿವಾರ ಸಂಜೆ ನಡೆದಿದೆ.

ಬಾಗಲಕೋಟೆ ಜಿಲ್ಲೆಯ ಬೀಳಗಿಯ ಸೋಮಶೇಖರ್ (55) ಪ್ರಕಾಶ್ (28) ಸ್ಥಳದಲ್ಲೇ ಮೃತಪಟ್ಟಿದ್ದು, ಮೃತ ಪ್ರಕಾಶ್ ಅವರ ತಾಯಿ ರೂಪಾ ( 48) ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಕಲಬುರಗಿ ಜಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಲಬುರಗಿಯಿಂದ ಬೀಳಗಿ ಪಟ್ಟಣಕ್ಕೆ ಕಾರಿನಲ್ಲಿ ತೆರಳುತ್ತಿದ್ದಾಗ ಈ ದುರಂತ ನಡೆದಿದ್ದು, ಬಸ್ ಅಪ್ಪಳಿಸಿದ ರಭಸಕ್ಕೆ ಕಾರಿನ ಮುಂಭಾಗದಲ್ಲಿ ಕುಳಿತಿದ್ದ ತಂದೆ–ಮಗ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ದೇವಲ ಗಾಣಗಾಪುರ ಪೊಲೀಸರು ಘಟನಾ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಶ್ರಾವಣ ಮಾಸದ ಅಂಗವಾಗಿ ಶ್ರೀ ಪಾಮಣ್ಣ ತಾತಾನವರ ಪಲ್ಲಕ್ಕಿ ಮೆರವಣಿಗೆ



ಯುವ ಮಾರ್ಗ ಸುದ್ದಿ

**ಮಾನ್ವಿ,ಆ.11–** ಪಟ್ಟಣದ ಅಂಬಿಗಾರ ಚೌಡಯ್ಯನಗರದಲ್ಲಿನ ಶ್ರೀ ಪಾಮಣ್ಣ ತಾತಾನವರ ದೇವಸ್ಥಾನದಲ್ಲಿ ಶ್ರಾವಾಣ ಮಾಸದ ಸೋಮವಾರದ ಅಂಗವಾಗಿ ಗಂಗೆ ಪೂಜೆ ನಡೆಸುವುದಕ್ಕೆ ಶ್ರೀ ಪಾಮಣ್ಣ ತಾತಾನವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಕೊಂಡು ನೂರಾರು ಭಕ್ತರು ,ಸುಮಂಗಲಿಯರು ಕಳಸದೊಂದಿಗೆ ಮದ್ಲಾಪೂರ ಗ್ರಾಮದಲ್ಲಿನ ತುಂಗಭದ್ರನದಿಯಲ್ಲಿ ಗಂಗೆ ಪೂಜೆ ನೆರವೇರಿಸುವುದಕ್ಕೆ ಮೆರವಣಿಗೆ ಮೂಲಕ ತೆರಳಿದರು.

## ತಾಲೂಕು ಆರೋಗ್ಯ ಇಲಾಖೆಯ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷರಾಗಿ ಅಜಯ ನಾಯಕ ನೇಮಕ




ಯುವ ಮಾರ್ಗ ಸುದ್ದಿ

**ದೇವದುರ್ಗ,ಆ.11–** ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆಯ ವಿವಿಧ ವೃಂದದ ಹೊರಗುತ್ತಿಗೆ ನೌಕರರ ಸಂಘ(ರಿ) ರಾಯಚೂರು ಜಿಲ್ಲಾ ಅಧ್ಯಕ್ಷರಾದ ಶಂಕರ್ ಗುಂಡಸಾಗರ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಆಸ್ಪತ್ರೆ ದೇವದುರ್ಗದಲ್ಲಿನ ನಡೆದ ಸಭೆಯಲ್ಲಿ ದೇವದುರ್ಗ ತಾಲೂಕು ಹೊರಗುತ್ತಿಗೆ ನೌಕರರ ಸಂಘ ರಚನೆ ಮಾಡಿ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.

ದೇವದುರ್ಗ ತಾಲೂಕು ಆರೋಗ್ಯ ಇಲಾಖೆಯ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷರಾಗಿ ಅಜಯನಾಯಕ ಬಿ.ಗಣೇಕಲ್ ಸಮುದಾಯ ಆರೋಗ್ಯ ಕೇಂದ್ರ ಅರಕೇರಾ, ಉಪಾಧ್ಯಕ್ಷರಾಗಿ ಚನ್ನಬಸವ ಶಾಖೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಸರಕಲ್, ಕಾರ್ಯದರ್ಶಿಯಾಗಿ ನಾಗಯ್ಯಸ್ವಾಮಿ ಚಿಕ್ಕಮಠ ಸಮುದಾಯ ಆರೋಗ್ಯ ಕೇಂದ್ರ ಅರಕೇರಾ, ಖಜಾಂಜಿಯಾಗಿ ಸುಗರೆಡ್ಡಿ ಸಮುದಾಯ ಆರೋಗ್ಯ ಕೇಂದ್ರ ಜಾಲಹಳ್ಳಿ ಇವರುಗಳನ್ನು ಅವಿರೋಧವಾಗಿ ಆಯ್ಕೆಮಾಡಲಾಗಿದೆಂದು ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆಯ ವಿವಿಧ ವೃಂದದ ಹೊರಗುತ್ತಿಗೆ ನೌಕರರ ಸಂಘ(ರಿ) ರಾಯಚೂರು ಜಿಲ್ಲಾ ಅಧ್ಯಕ್ಷರಾದ ಶಂಕರ್ ಗುಂಡಸಾಗರ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರಕೇರಾ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರಾಗಿ ದಸ್ತಗಿರಿಸಾಬ ಕೊತ್ತದೊಡ್ಡಿ ನೇಮಕ



ಯುವ ಮಾರ್ಗ ಸುದ್ದಿ

**ಅರಕೇರಾ,ಆ.11–** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ಘಟಕದ ರಾಜ್ಯ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಕೆ.ಅಬ್ದುಲ್ ಜಬ್ಬಾರ್ ಇವರ ಆದೇಶದ ಮೇರೆಗೆ ಹಾಗೂ ದೇವದುರ್ಗ ವಿಧಾನಸಭಾ ಕ್ಷೇತ್ರದ ಪರಾಜಿತ್ ಅಭ್ಯರ್ಥಿಯಾದ ಶ್ರೀ ದೇವಿನಾಯಕ ಇವರ ಶಿಪಾರಸ್ಸಿನ ಮೇರೆಗೆ ಕಾಂಗ್ರೆಸ್ ಪಕ್ಷದ ಸಂಘಟನೆಯ ಹಿತದೃಷ್ಟಿಯಿಂದ ದಸ್ತಗಿರಿಸಾಬ ತಂದೆ ರಸೂಲಸಾಬ ಸಾ॥ಕೊತ್ತದೊಡ್ಡಿ ಇವರನ್ನು ಅಲ್ಪಸಂಖ್ಯಾತರ ಘಟಕದ ಅರಕೇರಾ ಬ್ಲಾಕ್ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ.ತಕ್ಷಣದಿಂದಲ್ಲೇ ಜವಾಬ್ದಾರಿವಹಿಸಿಕೊಂಡು ಪಕ್ಷದ ಸಂಘಟನೆ ಜೊತೆಗೆ ಅಲ್ಪಸಂಖ್ಯಾತ ಸಮುದಾಯದ ಅಭಿವೃದ್ಧಿಯಲ್ಲಿ ತೊಡಗಬೇಕೆಂದು ಆದೇಶಿಸಿದೆ.

ನೂತನವಾಗಿ ನೇಮಕವಾಗಿರುವ ಅರಕೇರಾ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರಾಗಿ ದಸ್ತಗಿರಿಸಾಬ ಕೊತ್ತದೊಡ್ಡಿ ಇವರು ಅರಕೇರಾ ಪಟ್ಟಣದಲ್ಲಿನ ರಾಜಶೇಖರನಾಯಕರವರ ನಿವಾಸದಲ್ಲಿ ಶ್ರೀದೇವಿ ಆರ್ ನಾಯಕರವರನ್ನು ಬೇಟಿಯಾಗಿ ದಸ್ತಗಿರಿಸಾಬ ಹಾಗೂ ಅವರ ಸಮಾಜದ ಮುಖಂಡರು ಹಾಗೂ ಕೊತ್ತದೊಡ್ಡಿ ಗ್ರಾಮದ ಕಾಂಗ್ರೆಸ್ ಪಕ್ಷದ ಮುಖಂಡರು ಸೇರಿ ಕೊಂಡು ಶ್ರೀದೇವಿ ಆರ್ ನಾಯಕರವರಿಗೆ ಸನ್ಮಾನಿಸಿ ಗೌರವಿಸಿದರು.

ಶ್ರೀದೇವಿ ಆರ್ ನಾಯಕರವರು ಕೂಡಾ ನೂತನವಾಗಿ ನೇಮಕಗೊಂಡ ದಸ್ತಗಿರಿಸಾಬ ಇವರನ್ನು ಕಾಂಗ್ರೆಸ್ ಪಕ್ಷದವತಿಯಿಂದ ಸನ್ಮಾನಿಸಲಾಯಿತು.ಸಂದರ್ಭದಲ್ಲಿ ಶಿವರಾಜಪೂಜಾರಿ, ಶಿವರಾಜಮಾದೇ ಅಲ್ಲಿಸಾಬ,ಮುಲ್ಲಾಸಾಬ, ಹರ್ಷವರ್ದನಮೇಟಿ, ಹನುಮಂತ್ರಾಯ ಈರ,ಕ್ರೀಷ್ಟಪ್ಪನಾಯಕ ಚಿಕ್ಕಗುಡ್ಡ, ಹನುಮಂತ್ರಾಯ, ಶಿವಪ್ಪನಿಂಗಲದೊಡ್ಡಿ, ಲಿಂಗಣ್ಣನಾಯಕ ಹವಲ್ದಾರ, ಕುಮಾರ ರಾಠೋಡ ದೇವದುರ್ಗ ಬ್ಲಾಕ್ ಯೂತ್ ಕಾಂಗ್ರೆಸ್ ಅಧ್ಯಕ್ಷರು, ರಾಜುನಾಯಕ,ವೆಂಕಟೇಶಮಾದೇ ಯಕಬಾಲಸಾಬ, ಖಾಜಾಹುಸೇನ್,ಸೇರಿದಂತೆ ಕಾಂಗ್ರೆಸ್ ಪಕ್ಷದಕಾ ರ್ಯಕರ್ತರು ಮುಖಂಡರುಗಳು ಭಾಗವಹಿಸಿದ್ದರು.

## ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಮುಖ್ಯ: ಶರಣಬಸವ




ಯುವ ಮಾರ್ಗ ಸುದ್ದಿ

**ಮಾನ್ವಿ,ಆ.11–** ಪಟ್ಟಣದ ಕಲ್ಮಠ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಅಡವಿ ಅಮರೇಶ್ವರ ಸರಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಶರಣಬಸವ ಉದ್ಘಾಟಿಸಿ ಮಾತನಾಡಿ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸಿ ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಕಲ್ಮಠ ಶಿಕ್ಷಣ ಸಂಸ್ಥೆಯು ಶ್ರಮಿಸುತ್ತಿದೆ ಎಂದು ತಿಳಿಸಿದರು

ಕಲ್ಮಠ ಪ್ರೌಢಶಾಲೆಯ ಮುಖ್ಯಗುರು ಪ್ರಭಯ್ಯಸ್ವಾಮಿ ಮಾತನಾಡಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸು ಪಡೆಯಬೇಕಾದಲ್ಲಿ ವಿದ್ಯಾರ್ಥಿಗಳು ಪಠ್ಯದೊಂದಿಗೆ ಐ.ಎ.ಎಸ್. ಹಾಗೂ ಕೆ.ಎ.ಎಸ್. ಪರೀಕ್ಷೆಗಳಿಗೆ ಇಂದಿನಿಂದಲೇ ಸಿದ್ದತೆ ಮಾಡಿಕೊಳ್ಳುವಂತೆ ತಿಳಿಸಿದರು. ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಎಸ್ .ಎಸ್.ಪಾಟೀಲ್, ಕಲ್ಮಠ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಸಿದ್ದನಗೌಡ ಪಾಟೀಲ, ಕಲ್ಮಠ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಮಂಜುನಾಥ ಕಮತರ, ಎನ್.ಸಿ ಸಿ ಅಧಿಕಾರಿ ವಿರುಪಣ್ಣ ಪಾಟೀಲ, ಮದ್ಲಾಪುರ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಯೂನಿಸ್ ಬಾಬು, ಅಲ್ ಪುರಖಾನ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಂ.ಡಿ.ರಫಿ , ಸಾಹಿತಿ ರಮೇಶಬಾಬು ಯಾಳಗಿ, ಉಪನ್ಯಾಸಕ ಉಮರ್ ದೇವರಮನಿ ,ಗೌರಮ್ಮ ಪಾಟೀಲ. ದುರ್ಗಾ ಸೇರಿದಂತೆ ಇನ್ನಿತರರು ಇದ್ದರು.

## ಅಗ್ನಿವೀರ್ ಸೇನಾ ಭರ್ತಿ: ನಾಲ್ಕನೇ ದಿನ 764 ಅಭ್ಯರ್ಥಿಗಳು ಭಾಗಿ

**ರಾಯಚೂರು,ಆ.11–**ಅಗ್ನಿವೀರ್ ಸೇನಾ ಭರ್ತಿಗೆ ಆಗಸ್ಟ್ 11 ರಂದು ಒಟ್ಟು 764 ಅಭ್ಯರ್ಥಿಗಳು ವರದಿ ಮಾಡಿಕೊಂಡರು.

ಆಗಸ್ಟ್ 11 ರಂದು ಒಟ್ಟು 860 ಅಭ್ಯರ್ಥಿಗಳುಭಾಗವಹಿಸಬೇಕಿತ್ತು. 860 ಪೈಕಿ 764 ಅಭ್ಯರ್ಥಿಗಳು ಹಾಜರಾಗಿದ್ದು, ಇದರಲ್ಲಿ 484 ಅಭ್ಯರ್ಥಿಗಳು 1600 ಮೀಟರ್ ಓಟದಲ್ಲಿ ಉತ್ತೀರ್ಣರಾಗಿ ಮುಂದಿನ ದೈಹಿಕ ಪರೀಕ್ಷೆ ಆಯ್ಕೆ ಯಾಗಿದ್ದಾರೆ ಎಂದು ಸೇನಾಧಿಕಾರಿ ಮನೋಜ್ ಅವರು ತಿಳಿಸಿದ್ದಾರೆ.

## ಯೂರಿಯಾ, ಡಿಎಪಿ ರಸಗೊಬ್ಬರ ಲಭ್ಯ: ಪ್ರಕಾಶ್ ಚೌಹಾಣ್

**ರಾಯಚೂರು,ಆ.11–**ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಿಂದ 2025–26 ಸಾಲಿನ ಮುಂಗಾರು ಹಂಗಾಮಿಗೆ ಜಿಲ್ಲೆಗೆ ನಿಗದಿಪಡಿಸಿದ ಗುರಿಯಂತೆ ಯೂರಿಯಾ, ಡಿ.ಎ.ಪಿ ರಸಗೊಬ್ಬರ ಜಿಲ್ಲೆಗೆ ಬರುತ್ತಿದ್ದು, ರಸಗೊಬ್ಬರದ ಕೊರತೆ ಬಗ್ಗೆ ರೈತರು ಆತಂಕಪಡುವ ಅವಶ್ಯಕತೆ ಇರುವುದಿಲ್ಲ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರಕಾಶ್ ಚೌಹಾಣ್ ಅವರು ತಿಳಿಸಿದ್ದಾರೆ.

ಆಗಸ್ಟ್ 8ರಂದು ಜಿಲ್ಲೆಯಲ್ಲಿ ಯೂರಿಯಾ ಗೊಬ್ಬರವು ಪಿಎಸಿಎಸ್ ಸಿಂಧನೂರು–13, ತುಂಗಾಭದ್ರ ಎಫ್‌ಪಿಒ ಸಿಂಧನೂರು–12, ಪಿಎಸಿಎಸ್ ಸಾಲಗುಂದಾ–13, ಪಿಎಸಿಎಸ್ ಗೋನವಾರ–12, ಸ್ವಾಸ್ತ್ರ ಎಫ್‌ಪಿಒ ಜವಳಗೇರಾ–13 ಪಿಎಸಿಎಸ್ ಜವಳಗೇರಾ–12, ಪಿಎಸಿಎಸ್ ಗುಂಜಳ್ಳಿ–12 ಪಿಎಸಿಎಸ್ ಹಾರಾಪುರ–12, ಪಿಎಸಿಎಸ್ ದಿನ್ನಿ–9, ಪಿಎಸಿಎಸ್ ತಲಮಾರಿ–9, ನಂದಿನಿ ಎಫ್‌ಪಿಒ ನೆಲಹಾಳ–9, ಟಿಎಪಿಸಿಎಮ್‌ಎಸ್ ಮಾನವಿ–36 ಪಿಎಸಿಎಸ್ ನಕ್ಕುಂದಿ–18, ಪಿಎಸಿಎಸ್ ಚೀಕಲಪರ್ವಿ–9, ಪಿಎಸಿಎಸ್ ಆಲ್ಕೋಳ–9, ಪಿಎಸಿಎಸ್ ಹರವಿ–9, ಪಿಎಸಿಎಸ್ ಕವಿತಾಳ–9, ಪಿಎಸಿಎಸ್ ಕುರ್ಡಿ–9, ಟಿಎಪಿಸಿಎಮ್‌ಎಸ್ ದೇವದುರ್ಗ–36, ಪಿಎಸಿಎಸ್ ಹೀರೆಕೋಟೆಕಲ್–9, ಆರ್‌ಎಪಿಸಿಎಮ್‌ಸಿ ರಾಯಚೂರು–18, ಪಿಎಸಿಎಸ್ ತುರ್ವಿಹಾಳ–9, ಪಿಎಸಿಎಸ್ ಅರಳಹಳ್ಳಿ–9, ಪಿಎಸಿಎಸ್ ಮಲ್ಲಾಪುರ–9, ಪಿಎಸಿಎಸ್ ತಿಡಿಗೋಳ–9, ಪಿಎಸಿಎಸ್ ಉದ್ಬಾಳ–9 ಮೆಟ್ರಿಕ್ ಟನ್ ಯೂರಿಯಾ ಗೊಬ್ಬರ ವಿತರಿಸಲಾಗಿದೆ.

ಆಗಸ್ಟ್ 8ರಂದು ಜಿಲ್ಲೆಯಲ್ಲಿ ಡಿ.ಎ.ಪಿ ಗೊಬ್ಬರವು ಪಿಎಸಿಎಸ್ ಹೀರಾಪುರ–18, ಪಿಎಸಿಎಸ್ ದಿನ್ನಿ–9, ಪಿಎಸಿಎಸ್ ತಲಮಾರಿ–9, ನಂದಿನಿ ಎಫ್‌ಪಿಒ ನೆಲಹಾಳ–7.5, ಪಿಎಸಿಎಸ್ ಚೀಕಲಪರ್ವಿ–9, ಪಿಎಸಿಎಸ್ ಆಲ್ದಾಳ–9, ಪಿಎಸಿಎಸ್ ಹರವಿ–9, ಪಿಎಸಿಎಸ್ ಕವಿತಾಳ–9, ಪಿಎಸಿಎಸ್ ಕುರ್ಡಿ–9, ಟಿಎಪಿಸಿಎಮ್‌ಎಸ್ ದೇವದುರ್ಗ–18, ಪಿಎಸಿಎಸ್ ಹೀರೆಕೊಟ್ನೇಕಲ್–9, ಪಿಎಸಿಎಸ್ ತುರ್ವಿಹಾಳ–9, ಪಿಎಸಿಎಸ್ ಅರಳಹಳ್ಳಿ–9, ಪಿಎಸಿಎಸ್ ಮಲ್ಲಾಪುರ–9, ಪಿಎಸಿಎಸ್ ತಿಡಿಗೋಳ–9, ಪಿಎಸಿಎಸ್ ಉದ್ಬಾಳ–9 ಮೆಟ್ರಿಕ್ ಟನ್ ಡಿ.ಎ.ಪಿ ಗೊಬ್ಬರವು ರೈತರಿಗೆ ವಿತರಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಧಾರ್ ಸೀಡಿಂಗ್ ಮಾಡಿಸುವಂತೆ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸೂಚನೆ

**ರಾಯಚೂರು.ಆ.11–**ಇಲ್ಲಿನ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಿಂದ ಜಿಲ್ಲೆಯ ಎಸ್.ಎಸ್.ಎಲ್.ಸಿ ಪ್ರೋತ್ಸಾಹಧನಕ್ಕಾಗಿ 2020 ರಿಂದ 2025ರವರೆಗೆ ಆಧಾರ್ ಸೀಡಿಂಗ್ ಮಾಡಲು ಬಾಕಿ ಇರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಆಧಾರ್ ಸೀಡಿಂಗ್ ಮಾಡಲು ಕ್ರಮವಹಿಸುವಂತೆ ಕೋರಲಾಗಿದೆ.

ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಶೇ.60 ರಿಂದ 74.99 ರವರೆಗೆ 7000 ರೂ.ಗಳು ಮತ್ತು ಶೇ.75 ಕ್ಕಿಂತ ಅಧಿಕ ಫಲಿತಾಂಶಗಳಿಸಿದ ವಿದ್ಯಾರ್ಥಿಗಳಿಗೆ 15,000 ರೂ.ಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಕಡ್ಡಾಯವಾಗಿ ಬ್ಯಾಂಕ್ ಅಥವಾ ಪೋಸ್ಟ್ ಖಾತೆಗೆ ಆಧಾರ್‌ಸಿಂಡಿಂಗ್ ಮಾಡಿಸಿದ್ದಲ್ಲಿ ನೇರವಾಗಿ ಕೇಂದ್ರ ಕಚೇರಿಯ ಮೂಲಕ ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆ ಅಥವಾ ಪೋಸ್ಟ್ ಖಾತೆಗೆ ಡಿ.ಬಿ.ಟಿ. ಮೂಲಕ ನೇರ ವರ್ಗಾವಣೆ ಮಾಡಲಾಗುತ್ತಿದೆ.

2020ರಲ್ಲಿ 245, 2021ರಲ್ಲಿ 578, 2022ರಲ್ಲಿ 496, 2023ರಲ್ಲಿ 722, 2024ರಲ್ಲಿ 333, 2025ರಲ್ಲಿ 1546 ಸೇರಿದಂತೆ ಒಟ್ಟು 3,920 ವಿದ್ಯಾರ್ಥಿಗಳು ಆಧಾರ್ ಜೋಡಣೆ ಮಾಡಿರುವುದಿಲ್ಲ. ಈ ಹಿನ್ನಲೆಯಲ್ಲಿ ಎಸ್.ಎಸ್.ಎಲ್.ಸಿ ಪ್ರೋತ್ಸಾಹಧನಕ್ಕಾಗಿ 2020 ರಿಂದ 2025ರವರೆಗೆ ಆಧಾರ್ ಸೀಡಿಂಗ್ ಮಾಡಲು ಬಾಕಿ ಇರುವ ಅರ್ಜಿಗಳಿಗೆ ಸೀಡಿಂಗ್ ಮಾಡಲು ಕ್ರಮವಹಿಸಿ ಈ ಕಚೇರಿಗೆ ವಿದ್ಯಾರ್ಥಿಯ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಆಧಾರ್ ಕಾರ್ಡನ ಪ್ರತಿ ಸಲ್ಲಿಸುವಂತೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H